# ಅಪರಂಜಿ

ಸೆಪ್ಟೆಂಬರ್
1991


ತಿಳಿನಗೆಯ ಕಾರಂಜ



ಪ್ರಕಾಶ್
ಶಿವರಾಮು ಕಾರಂತ
ವಿಜಯಾ ಸಚ್ಚಿದಾನಂದ
ಸೀ. ಆರ್. ಸತ್ಯ
ಕಂಭಂ ಕೃಷ್ಣಮೂರ್ತಿ
ಅ. ರಾ. ಸೇ.
ಕಮಲಾ ರಾಮಸ್ವಾಮಿ
ಶಾಂತಾ ರಘು
ಡಿಂಕ್
ಶಿವು

ಡಿ ಪ್ರತಿ: 2 ರೂ. 50 ಪೈ.

ಶುಭಾಶಯಗಳೊಂದಿಗೆ



## ಎಸ್. ವಿ. ಆರ್. ಏಜೆನ್ಸೀಸ್

ಬೆಂಗಳೂರು




ಸಂಪುಟ ೮ | ಸೆಪ್ಟೆಂಬರ್ ೧೯೯೧ | ಸಂಚಿಕೆ ೧೨

ಟೊಮಾಟೊ ಬೆಳೆಗಾರ ತಮ್ಮಣ್ಣನಿಗೆ ಒಂದೇ ಚಿಂತೆ. ಟೊಮಾಟೊ ಬೆಲೆ ಗಗನಕ್ಕೆ ಏರಿದ್ದರೂ ತನಗೆ ಸಿಗುತ್ತಿದ್ದುದು ಕೆ. ಜಿ. ಗೆ ಎರಡು ರೂಪಾಯಿ ಮಾತ್ರ. ಅಂಗಡೀಲಿ ಕೊಳ್ಳೊ ಗಿರಾಕಿಗಳು ಎಷ್ಟು ಕೊಡ್ತಿದ್ದಾರೆ ಅಂತ ತಿಳ್ಕೊಳ್ಳೊಣ ಅಂತ ಸಂಗೀತ ವಿದ್ವಾಂಸರೊಬ್ಬರನ್ನ ಕೇಳಿದ:

"ಸ್ವಾಮಿ, ಟೊಮಾಟೊ ಎಷ್ಟು ಬೆಲೆಗೆ ಸಿಗುತ್ತೆ ತಮಗೆ?"

ವಿದ್ವಾಂಸರು ಎರಡು ಕ್ಷಣ ನಿಧಾನಿಸಿ ಉತ್ತರಿಸಿದರು.

"ಈಚೆಗೆ ನಾನು ಟೊಮಾಟೊ ಕೊಂಡಿಲ್ಲಾಪ್ಪ. ಆದರೆ ಮೊನ್ನೆ ನಾನು ಸಂಗೀತ ಕಛೇರೀಲಿ ಹಾಡು ಹೇಳ್ತಿದ್ದಾಗ ಬೇಕಾದಷ್ಟು ಜನ ಬಿಟ್ಟಿ ಟೊಮಾಟೊಗಳನ್ನ ವೇದಿಕೆಯ ಮೇಲೆ ಎಸೆದರು."


| | | |
|---|---|---|
| ಗೌರವ ಸಲಹೆಗಾರರು :<br>ಶ್ರೀ ಅ. ರಾ. ಸೇ.<br>ಶ್ರೀ ಜೇಪಗಿ<br><br>ಸಂಪಾದಕ :<br>ಶಿವಕುಮಾರ್ | ಚಂದಾ ವಿವರ :<br>ಬಿಡಿ ಪ್ರತಿ :<br>2 ರೂ. 50 ಪೈ.<br>ವಾರ್ಷಿಕ ಚಂದಾ<br>25 ರೂ.<br>ಆಜೀವ ಚಂದಾ :<br>250 ರೂ. | ವಿಳಾಸ :<br>ಅಪರಂಜಿ ಕಾರ್ಯಾಲಯ<br>36, 6ನೆಯ ಮುಖ್ಯ ರಸ್ತೆ,<br>ಮಲ್ಲೇಶ್ವರಂ<br>ಬೆಂಗಳೂರು 560003<br>ಕೆಲಸದ ವೇಳೆ :<br>ಬೆಳಗ್ಗೆ ೮ರಿಂದ 10 ಗಂಟೆಯ ವರೆಗೆ |

ಈ ಸಂಚಿಕೆಯಲ್ಲಿ


| ಲೇಖನ | ಲೇಖಕ/ಲೇಖಕಿ | ಪುಟ |
|---|---|---|
| ಅಪಗಂಜಿ ಕಿಡಿ | ಪ್ರಕಾರ್ | 4 |
| ಯಾರು ಋಣಿಗಳಲ್ಲ ಹೇಳಿ ? | ಶಿವರಾಮ ಕಾರಂತ | 6 |
| ಮದುವೆ ಮನೆ ರಿಸೆಪ್ಷನ್ನಲ್ಲಿ... | ಪ್ರಕಾಶ್ | 9 |
| ಭಾನು ಬಿಪಾಡಿ | ವಿಜಯಾ ಸಚ್ಚಿದಾನಂದ | 11 |
| "ಸರ್ವೇ ಸುಖಿನೋ ಭವ–" | ಸೀ. ಆರ್. ಸತ್ಯ | 15 |
| ಯಾರು ಹುಚ್ಚರು ? | ಕಂಭಂ ಕೃಷ್ಣಮೂರ್ತಿ | 19 |
| ಪರಿಮಿತಿಗಳು | ಅ. ರಾ. ಸೇ. | 25 |
| ಕೆಂಬೂತ ಪುಕ್ಕ ತೆರೆದರೆ ನವಿಲೇ ? | ಕಮಲಾ ರಾಮಸ್ವಾಮಿ | 28 |
| ಶುಭಾಶಯಗಳು | ಅ. ರಾ. ಸೇ. | 31 |
| ಯಾಕೆ ಹೀಗೆ ?! | ಶಾಂತಾ ರಘು | 34 |
| ನಿರುದ್ಯೋಗಿಯ ಸ್ವಪ್ನ | ಲಿಂಕ್ | 37 |
| ತರೀ ಕೆರೆ ಕೆರೆ ಏರಿ ಮೇಲೆ | ಶಿವು | 38 |



ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ ; 342144

# ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೮ ಸೆಪ್ಟೆಂಬರ್ ೧೯೯೧ ಸಂಚಿಕೆ ೧೨

ಪುರುಷನು ಯಜ್ಞ, ಹಸಿವು, ಬಾಯಾರಿಕೆ, ಬೇಸರಗಳು ದೀಕ್ಷೆ. ಊಟ, ನೀರು ಕುಡಿಯುವುದು, ರತಿಗಳು ಉಪಸದಗಳು. ನಗು, ತಿನ್ನುವುದು ಮೊದಲಾದವು ಸ್ತುತ ಶಸ್ತ್ರಗಳು. ತಪಸ್ಸು, ದಾನ ಆರ್ಜವ, ಅಹಿಂಸೆ, ಸತ್ಯವಾಕ್ಯಗಳು ದಕ್ಷಿಣೆ.....

—ರಹಸ್ಯ ಬ್ರಾಹ್ಮಣ.

ಬೆಳಗು, ಮಾಧ್ಯಾಹ್ನ, ಸಂಜೆಗಳು ಹೋಮಗಳು.

—ತೈತ್ತಿರೀಯ

---

ಜಗತ್ತು ಯಜ್ಞದಿಂದ ಸೃಷ್ಟಿಯಾಯಿತೆಂದು ಗೀತೆಯಲ್ಲಿ, ಪುರುಷ ಸೂಕ್ತದಲ್ಲಿ, ಹೇಳಿದೆ.

ತಾಂಡಿ, ಪೈಂಗಿ, ಬ್ರಾಹ್ಮಣಗಳಲ್ಲಿ ಪುರುಷನು ಯಜ್ಞವೆಂದು ಹೇಳಿದೆ. ತಿಳಿದವನು ಬೆಳಗು, ಮಧ್ಯಾಹ್ನ, ಸಂಜೆಗಳನ್ನು ಹೋಮಗಳೆಂದು ಭಾವಿಸುವನೆಂದು ತೈತ್ತಿರೀಯದಲ್ಲಿ ಹೇಳಿದೆ.

ಈಗ ಲೋಕದಲ್ಲೂ ಹಾಗೇ ಕಾಣುತ್ತದೆಯಲ್ಲಾ. ಬೆಳಗು, ಬೈಗು, ಹಗಲುಗಳಲ್ಲಿ ಪ್ರಾಣಿಗಳನ್ನು ಒಂದಲ್ಲ ಒಂದು ಕಡೆ ಶಸ್ತ್ರಾಸ್ತ್ರಗಳಿಂದ ಹೋಮ ಮಾಡುತ್ತಿಲ್ಲವೇ.


ಹಸಿವು ಬಾಯಾರಿಕೆ ಬೇಸರಗಳ ದೀಕ್ಷೆಯನ್ನು ಲೋಕದ ಬಹು ಜನರು ಧರಿಸಲೇಬೇಕಾಗಿದೆ. ಸರ್ಷಾನ್ನದ ಊಟ, ಮಲಿನ ಜಲದ ಪಾನ, ಕುಕ್ಕುಟಾಚಾರಗಳು ಈ ಬಲವಂತದ ದೀಕ್ಷೆಯ ಫಲಗಳಲ್ಲವೇ ?

ಸ್ವೇಚ್ಛಾಚಾರ, ಸುಲಿಗೆ. ಹಿಂಸೆ, ಅಸತ್ಯ ವಾಕ್ಯಗಳ ದಕ್ಷಿಣೆಯನ್ನು ಹುಲು ಮಾನವನಿಗೆ ಧಾರಾಳವಾಗಿ ಕೊಡುತ್ತಿದ್ದಾರೆ.

ನಗು ! ಅದು ಶಸ್ತ್ರವಾಗಿ ತೋರಿದ ಅಸಾಮಾನ್ಯರು ಅದನ್ನು ಕಿತ್ತೆಸೆದಿದ್ದಾರೆ. ಬವಣೆಯನ್ನು ಜನಸಾಮಾನ್ಯರಿಗೆ ಧಾರಾಳವಾಗಿ ಬಡಿಸುತ್ತಿದ್ದಾರೆ.

ಇದೇ ಅಲ್ಲವೆ ಶ್ರೀ ಅಸಾಮಾನ್ಯರ (ಅ)ಜ್ಞಾನ, (ವಿ ?)ಜ್ಞಾನಗಳು ಮಾನವ ಕುಲಕ್ಕೆ ನೀಡುವ ಕೊಡುಗೆ !

ಅಪರಂಜಿ ನಗುತ್ತಾಳೆ. ಸ್ತುತ ಶಸ್ತ್ರವಲ್ಲವೇ ನಗು !



ಪ್ರಕಾಶ್

---

ಒಡಹುಟ್ಟಿದವರು ತನ್ನ ನೀರಿಗಾಗಿ ಹೊಡೆದಾಡುವುದನ್ನು ನೋಡಿ. ಕಾವೇರಿ, ಕೆರಳಿ ಉಕ್ಕಿ ಹರಿದಳಂತೆ !

*　　　*　　　*

ನಾಗರಹೊಳೆ ಹುಲಿಗಳ ಸಾವು: ತಜ್ಞರ ಸಮಿತಿ.

— ಸುದ್ದಿ

ಹುಲಿಗಳು ಸತ್ತರೂ ವಿವಾದ ಜೀವಂತವಾಗಿದೆ !

*　　　*　　　*

ಮರಡೋನಾ ನಿವೃತ್ತಿ ನಿರ್ಧಾರ.

— ಪತ್ರಿಕೆ

ಈಗ 'ದೇವರ ಕೈ' ಅವರನ್ನು ರಕ್ಷಿಸಲಾರದು !

*　　　*　　　*

ರಾಜಕಾರಣಿಗಳಿಂದ ಅಲ್ಲದೆ ಅವರ ಬೃಹತ್ ಕಟೌಟ್‌ಗಳಿಂದ ಜನಕ್ಕೆ ಹಾನಿ ಆಗಬಹುದು ! !

*　　　*　　　*

ಸಂಸತ್ ಕಲಾಪ ನೇರ ಟಿ. ವಿ. ಪ್ರಸಾರಕ್ಕೆ ಸಲಹೆ.

—ಪತ್ರಿಕೆ

ಸಂಸತ್ ಕಲಹಗಳನ್ನೂ ತೋರಿಸುತ್ತಾರೋ ?

ಬೃಂದಾವನಕ್ಕೆ ಒಂದು ತಿಂಗಳು ಪ್ರವೇಶವಿಲ್ಲ.
ನವವಿವಾಹಿತರಿಗೆ ಅಪ್ರಿಯ ಸುದ್ದಿ !

* * *

ಮೊನ್ನೆ ಭಿಕ್ಷುಕನೊಬ್ಬನಿಗೆ ನಾಲ್ಕಾಣೆ ಹಾಕಿದೆ ! ಅದನ್ನ ಅವ ಪಕ್ಕದಲ್ಲಿದ್ದ ಮರಿ ಭಿಕ್ಷುಕನಿಗೆ ಹಾಕಿದ ಅಂತ ಸ್ನೇಹಿತರೊಬ್ಬರು ಬರೆದಿದ್ದಾರೆ.

ರೂಪಾಯಿಯ ಅಪಮೌಲ್ಯ ಅಂದರೆ ಅರ್ಥವಾಯಿತು !

* * *

ರಾಜಕಾರಣಿಗಳನ್ನೆಲ್ಲ ದೋಣಿಯಲ್ಲಿ ಕೂರಿಸಿ ತೇಲಿ ಬಿಡಬೇಕು.

—ಅನಿಲ್ ಧಾರ್ಕರ್ ಹೇಳಿಕೆ

ಸಭಾತ್ಯಾಗ ಮಾಡುವವರಿಗೆ ಎಚ್ಚರಿಕೆ !

* * *

ಪಾರ್ಲಿಮೆಂಟಿನಲ್ಲಿ ಟೀ ಮಾರುವವನಿಗೆ ಮಂತ್ರಿಗಳೊಬ್ಬರು 12 ರೂ. ಬಾಕಿ ಕೊಡಬೇಕಂತೆ.

— ಸುದ್ದಿ

ಅವನು ಅವರನ್ನು ಚಾಚಾ ಎಂದು ಕರೆದದ್ದೇ ತಪ್ಪು !

* * *

ಪಾಕೀಸ್ಥಾನದಲ್ಲಿ ಸಿಂದ್ ಡಕಾಯಿತ್ ಬ್ಯಾಂಕ್ ಅಂತ ಭಾರೀ ಬ್ಯಾಂಕ್ ಇದೆಯಂತೆ.

—ಸುದ್ದಿ

ಭಾರತದಲ್ಲಿ ಅಷ್ಟು ಧೈರ್ಯವಾಗಿ ಹೇಳುವ ಹಾಗಿಲ್ಲ ಅಷ್ಟೆ ! !

* * *

ಟೆಲಿಫೋನ್ ಕದ್ದಾಲಿಕೆ ಪ್ರಕರಣ; ತನಿಖೆಗೆ ಆಗ್ರಹ.

—ಪತ್ರಿಕೆ.

ಅಯ್ಯೋ ! ರಾಮಕೃಷ್ಣ ! !

# 6

# ಯಾರು ಋಣಿಗಳಲ್ಲ ಹೇಳಿ ?

**ಶಿವರಾಮ ಕಾರಂತ**

---

ಮಗು ಅಪ್ಪಂಗೆ. ಅಪ್ಪ ಅಜ್ಜಂಗೆ, ಅಜ್ಜ ಮುತ್ತಜ್ಜಗೆ !
ಇಂದು ನಿನ್ನೆಗೆ, ನಿನ್ನೆ ಮೊನ್ನೆಗೆ. ಮೊನ್ನೆ ಆ ಮೊನ್ನೆಗ,
ಋಣಿಯಲ್ಲವೇ ಹೇಳಿ ; ತೀರಿಸಲುಂಟೆ ಹೇಳಿ !

ಹೆಣ ಭಾರದೀ ಬದುಕಿನಲಿ ಯಾರಲ್ಲ ಋಣಿಗಳು ?
ಋಣವೆಂಬುದೇನಂಥ ಹೊರೆಯೆನಿಸಬೇಕೆ ?

ಕೊಟ್ಟುದನು ಮರಳಿಸು ಎಂಬುದದೊಂದು ಚಾಳಿ
ಶತಮಾನ ಶತಮಾನಗಳಿಂದ ಬೀಸಿ ಬಂದಿಹ ಗಾಳಿ
ಹಾಗೆ ಅದ ಮರಳಿಸಿದೊಡೆ – ಇರಿಸಿಕೊಂಬಿರಿ ಎಲ್ಲ
ಆಗಬೇಕೇಕೆ ಅದಕೆ ಕಂಗಾಲು !

ಬಾನಿನಲಿ ದಿನ ನಿತ್ಯ ಕಂತಿ ಮೂಡುವ ಸೂರ್ಯ
ಎಂದಾದರೂ ಕೇಳಿದನೆ – 'ಮರಳಿಸೆಂದನೆ ಬಿಸಿಲ'

ದೂರ ಹೋಗಲು ಬೇಡ, ಸುತ್ತ ಹೊರಳಿಸಿ ಕಣ್ಣು
ನಾಲ್ಕು ಸುತ್ತಲು ಬೆಳೆದ ಪೆಮ್ಮರಗಳನು ಕಾಣು !

ಗಾಳಿ, ಮಳೆ, ಸಾರ, ನೀರುಗಳ ನೆಚ್ಚಿ ಬಾಳಿದವು
ಕೊಟ್ಟವರಿಗೇನು ಮರಳಿಸಿದುವು ಹೇಳಿ

ಈ ದೇಶದಾ ಜನತೆ ಉದ್ಧಾರಿಗಳ ಹಿರಿ ಸಂತೆ !
ನೆಲನ ಮಣ್ಣಿನ ಮಗಸು ಸಾಕಲಿಲ್ಲವೆ ಜನರ
ತಣಿಸಲಿಲ್ಲವೆ ಹೊಟ್ಟೆ—ಬೆಳೆ ಬೆಳೆದು ಪೈರ
ದುಡಿದು ಕಂಗೆಟ್ಟಾತ—ಮರಳಿಸಬೇಕೆ ಕೊಂಡ ಸಾಲ !

ನೇತಾರ ನೆಹರೂವೇ ಅಂದಿದ್ದ ಅಮೆರಿಕೆಗೆ –
'ಹೊರಿಸದಿರಿ–ಶರ್ತಗಳ–ಕೊಟ್ಟ ಸಾಲಕೆ' ಎಂದು !
ಅಂತಿರಲು ನಾವ್ ನೀವು ಬದುಕಲಿಕೆ
ಬೇಕೇ ಬೇಕು ಸಾಲ, ಅದನೆಷ್ಟು ಪಡೆದರು ಸಾಲ !

ಜಗದ ಬ್ಯಾಂಕೇ ಇರಲಿ, ಕುಬೇರನಪ್ಪನೆ ಇರಲಿ,
ಭಾರತಾಂಬೆಯು ಕೋಟಿ ಕೋಟಿ ಮಕ್ಕಳಿಗಿತ್ತ
ಸಾಲವನು ಯಾಚಿಪುದು, ಸಾಪದನು ಮರಳಿಪುದು,
ನ್ಯಾಯವೆನಿಸದು ನೋಡಿ ಧರ್ಮಕ್ಕೆ ಅವಮಾನ!

ಈ ದೇಶ ಬಡದೇಶ. ಇಲ್ಲಿನ ನರರು 'ಬಡಾ'
ಬುದ್ಧಿಯಲು ಹಾಗೆ, ಶ್ರದ್ಧೆಯಲು ಹಾಗೆ.
ಮಾಡಿದರು ಸಾಲ, ಮಾಡುವರು ಸಾಲ.

ಮಾಡಿಯೇ ಮಾಡುವರು, ಅಚ್ಚರಿಯೇನು ಹೇಳಿ
ಮರಳಿ ಕೇಂಬುದು ಉಂಟೆ! ಮರಳಿ ಸಲ್ಲಿಸಲುಂಟೆ!
ಎಂಥ ಮಾತಾಡುವಿರಿ ನಿಷ್ಕರುಣ ನೈತಿಕರೆ!
ಬಡ ದೇಶಗಳು ಎಲ್ಲಿ, ಬಡ ಜನರು ತಾವೆಲ್ಲಿ!

ಬಡಕಲಾಗಿರುವಷ್ಟು ದಿನ ಚಡಪಡಿಸದಿಹರೇ!
ಸಾಲ ಪಡೆಯಲು ಬದ್ಧ, ಅದನ ಅರಗಿಸೆ ಬದ್ಧ!
ಅರಗಿಸಿದ ಮರುಚಣಕೆ ಆಯ್ತುವರ ಕೈ ಶುದ್ಧ!

ನಮ್ಮೆಲ್ಲ ಪಕ್ಷಗಳು—ಹಿಂದಿನವು, ಇಂದಿನವು,
ಆಯ್ಕೆ ಬಂದುದೆ ನೋಡಿ ಮತ ಯಾಚನೆಯ ಮಾಡಿ!
ಆ ಮತವ ಪಡೆದದ್ದೇ ಸಾಲ ಮನ್ನಾ ಮಾಡಿ!

ನಮ್ಮೆಲ್ಲ ಹಾಡೊಂದೆ, ಮತ ಭೇದವೇನಿರಲಿ!
ಸಾಲಿಗರ ಬಗ್ಗೆ ನಮಗೆ ಅನುಕಂಪವೇ ಧರ್ಮ

ಜಾಗತಿಕ ನಿಧಿ ಇರಲಿ; ಯುನೋ ವೆ ಅದು ಇರಲಿ
'ಕೊಟ್ಟುದನು ಕೊಡು ಮರಳಿ, ಬಡ್ಡಿ ಸಹಿತೆ'ನ್ನದಿರಲಿ
ಯಾವಾತನೇ ಇರಲಿ, ದೇಶದೊಡೆಯನೆ ಇರಲಿ,
ಭುವಿಗೆ ಬಂದಾಗ ತಂದುದೇನಿಲ್ಲ—ನೆನಪಿರಲಿ.
ಇಲ್ಲಿಂದ ಮರಳುವಾ ಹೊತ್ತಿನಲ್ಲಿ ಒಯ್ಯುವುದೇನಿಲ್ಲ!

ಇರುವಾಗ ಇದ್ದೀತು ಕೆಲಕೆಲವರಿಗೆ ಹೀಗೆ –
ಸಾಲ ಮೂಲಗಳೆಂಬ ಮಾತುಗಳ ನೆಚ್ಚು.
ಇದೆ—ಇಲ್ಲ—ಎಂಬೆರಡು ಸೊಲ್ಲಿನಲಿ ಅಂತರ,

# 8

ಇಂಕಾರ ರಾಜ್ಯದಲಿ ನೆಲನ ಧೂಳೀ ಚಿನ್ನ
ಆಗಿ ಮೆರೆದಿಹ ದಿನವಿತ್ತು ಪೂರ್ವದಲಿ
ಇಂದು ನೋಡಿದರಲ್ಲಿ ಚಿನ್ನವಿಚ್ಛಿನ್ನ ಧೂಳು !

ಮಾನ ದುಮ್ಮಾನಗಳ ಬಿಂಬ ಸಾವೆಣಿಸಿದಂತೆ
ಅವು ಬೇರೆಂದು ತಿಳಿದಾಗ ಮನಕ್ಕೆ ಚಿಂತೆ !
ಆದ ತೂರೆದ ಜನ ಗಣವು ನಿರ್ಭೀತರಂತೆ.

ಭಾನುವಾರ ಬೆಳಗ್ಗೆ ಚರ್ಚಿನಿಂದ ಪ್ರಾರ್ಥನೆ ಮುಗಿಸಿ ಹಿಂತಿರುಗುತ್ತಿದ್ದ ರೀಟಾ, ಥಾಮಸ್‌ಗೆ ಹೇಳುತ್ತಿದ್ದಳು.

"ಏನನ್ಯಾಯಾರೀ, ಆ ರಿಟೈರ್ಡ್ ಸ್ಕೂಲ್ ಟೀಚರ್ ಮ್ಯಾಥ್ಯೂ, ಹೋಗಿ ಹೋಗಿ ಇಪ್ಪತ್ತು ವರ್ಷದ ಕ್ಯಾಥರೀನ್‌ನ್ನ ಮದುವೆ ಆಗಿದ್ದಾನಂತಲ್ಲ. ಬಡಹುಡುಗಿ ಆದ ಮಾತ್ರಕ್ಕೆ ಮುದುಕನ್ನ ಮದುವೆ ಆಗ್ಬೇಕೇ ? ಡಿಸೆಂಬರ್‌ಗೆ ಮೇ ಜೊತೆ ಇರುಕ್ಕೆ ಇಷ್ಟ ಪಡೋದೇನೋ ನನಗೆ ಅರ್ಥ ಆಗುತ್ತೆ. ಆದರೆ ಮೇ ಗೆ ಡಿಸೆಂಬರ್ ಮೇಲೆ ಏನು ಮೋಹ ಅಂತೀನಿ?"

ಥಾಮಸ್ ನಿಧಾನವಾಗಿ ಹೇಳಿದ.

"ಯಾಕೆ ಅಂದ್ರೆ ಡಿಸೆಂಬರ್ ಕೊನೇಲಿ ಕ್ರಿಸ್‌ಮಸ್ ಪ್ರೆಸೆಂಟ್ ಸಿಕ್ಕುತ್ತೆ ಅದಕ್ಕೆ".

9

# ಮದುವೆ ಮನೆ ರಿಸೆಪ್ಷನ್ನಲ್ಲಿ...

ಪ್ರಣಾಶ್

'ಯಾರ್ರೀ ಅವಳು ?'

'ಯಾರು ?'

'ಯಾರೇ ? ಅವಳೇ, ಬಳುಕುತ್ತ ಬಂದು ಬಿನ್ನಾಣದಿಂದ ಹಲೋ ರಾಜ್ ಅಂದಳಲ್ಲ ಅವಳು !'

'ಓ ಅವಳೇ, ಶೀಲಾ ಅಂತ, ನಂ ಆಫೀಸಿನಲ್ಲಿ ಸೆಕ್ರೆಟರಿ!'

'ನಿಂ ಸೆಕ್ಷನ್ನೇ ?'

'ಅಲ್ಲ, ಎಂ. ಡಿ. ಆಫೀಸಿನಲ್ಲಿದಾಳೆ !'

'ಮತ್ತೆ ನಿಮಗೆ ಹೇಗೆ ಇಷ್ಟು ಆಪ್ತಳಾದಳು ?'

'ಅಯ್ಯೋ, ಆಪ್ತಳೂ ಅಲ್ಲ ಏನೂ ಇಲ್ಲ! ನಂ ಫ್ಯಾಕ್ಟರೀ ಕನ್ನಡ ಸಂಘ ಇಲ್ವೇ, ಅದರಲ್ಲಿ ನಾವೆಲ್ಲ ಡ್ರಾಮ ಪ್ರಾಕ್ಟೀಸ್ ಮಾಡ್ತಾ ಇದೀವಿ ಅಷ್ಟೆ !'

'ಅದೇನೇನು ಪ್ರಾಕ್ಟೀಸ್ ಮಾಡ್ತೀರೋ ?'

'ನೋಡು ಸುಮಾ, ಹೀಗೆ ಮಾತಾಡಿದರೆ ನನಗೆ ರೇಗುತ್ತೆ !'

'ಓಹೋ, ನಿಂ ರೇಗೋದನ್ನ ನೋಡಿದೀನಿ ಬಿಡ್ರೀ, ಆಫೀಸಲ್ಲಿ ಏನೋ ಮಾಡಿದ್ರೆ ತಾನೆ ರೇಗೋದು ?'

'ಏಕೆ, ಸುಮ್ಮನಾಗಿದೀರಿ ?'

'ಸುಮ, ಏನು ಹೇಳಲಿ ನಾನು ? ನಿನ್ನ ನೋಡಿ ನಗು ಬರುತ್ತೆ ನನಗೆ! ಅಲ್ಲ ಸೀದಾ ಸಾದಾ, ಸಾಚಾ ಆಗಿ ಇರೋನು ನಾನು ! ಶೀಲಾ ಹಲೋ ಅಂದಿದ್ದಕ್ಕೇ ಇಷ್ಟು ವಿಚಾರಣೆ ಮಾಡ್ತೀಯಲ್ಲ, ಸಿ.ಬಿ.ಐ.ನೋರ ತರಹ !'

'ಸರಿ, ಸರಿ, ನಮ್ಮಪ್ಪ ಸಿ.ಐ.ಡಿ.ನಲ್ಲಿ ಇದ್ರು ಅಂತ ಅಪಹಾಸ್ಯನೋ ?'

ಅಮ್ಮಮ್ಮ, ಅದು ನನಗೆ ಮರೆತೇ ಹೋಗಿತ್ತಲ್ಲೇ ? ಸುಮ, ನೋಡು, ಇರೋ ವಿಷಯ ಇಷ್ಟೇ ! ನಾವೆಲ್ಲ ಸೇರಿ ಒಂದು ಡ್ರಾಮ ಆಡೋದಕ್ಕೆ ಸಿದ್ಧತೆ ಮಾಡ್ತಾ ಇದೇವೆ! ಅದರಲ್ಲಿ ನಾನು ಆಫೀಸರು, ಶೀಲಾ ಸೆಕ್ರೆಟರಿ. ಒಂದು ಸೀನ್‌ನಲ್ಲಿ ನಾನು ಆಫೀಸಿನಲ್ಲಿ ಕೂತಿರ್ತೀನಿ. ಶೀಲಾ ಬಂದು ಹಲೋ ಬಾಸ್ ? ಅಂತಾಳೆ ! ನಾನು ರೇಗಿ ಡೋಂಟ್ ಕಾಲ್ ಮೀ ಬಾಸ್ ! ಐ ಹ್ಯಾವ್ ಎ ನೇಮ್ ಅನ್ನಬೇಕು! ಶೀಲಾ ಆ ಸೀನ್‌ನ ಪ್ರಾಕ್ಟೀಸ್ ಮಾಡ್ತಾ ಇದ್ಲು ಅಷ್ಟೆ !'

'ಬಿಡ್ರೀ, ಕತೆ ಕಟ್ಬೇಡಿ ! ಡ್ರಾಮ ಅಂತೆ ಡ್ರಾಮ ! ಸರಿ, ನಮ್ಮಮ್ಮ ಹೇಳ್ತಾ ಇದ್ರು, ನಲವತ್ತು ವರ್ಷ ಆದ ಮೇಲೆ ಗಂಡಸರನ್ನ ನಂಬಬಾರ್ದು ಅಂತ !

'ನನಗಿನ್ನೂ ಮೂವತ್ತೊಂಭತ್ತು ! ಸಧ್ಯ !'

'ಹಾಸ್ಯ ಮಾಡಬೇಡಿ ! ಇದು ಗಂಭೀರವಾದ ವಿಷಯ!'

'ನಿನ್ನ ಸಂಶಯ ಪಿಶಾಚಿ ಇದೆಯಲ್ಲ ಅದನ್ನ ಹೇಗೆ ಓಡಿಸೋದು, ಅದೀಗ ಗಂಭೀರ ವಿಚಾರ !'

'ಸರಿ ಬಿಡಿ, ನಂಗೆ ಯಾವ ಪಿಶಾಚಿ ಹಿಡಿಯುತ್ತೆ, ಈಗ ಬಂದಿದ್ದಳಲ್ಲ ಆ ಪಿಶಾಚೀನ ದೂರ ಇಡಿ ಅಷ್ಟೆ !'

* * *

'ಸುಮ, ಯಾರವನು ? '

'ಯಾರು ?'

'ಯಾರು ಅಂದ್ಯ? ಅವನೇ ರಜನೀಕಾಂತ್ ತರಹ ಕ್ರಾಪು, ಕೈಲಿ ಸಿಗರೇಟು, ಹತ್ರ ಬಂದು ಏನ್ರೀ ಸುಮಾ, ತಿಂಡಿ ಆಯ್ತೇ ಅಂತ ವಿಚಾರಿಸಿದನಲ್ಲ ಅವನು !

'ಓ, ಅವನು ನಂ ಬ್ಯಾಂಕಿನಲ್ಲಿ ಅಸಿಸ್ಟೆಂಟ್ ಮಾನೇಜರು !'

'ಹೌದೆ ? ಸರಿ ! ಸುಮ, ಮಳೆ ಬರೋ ಹಾಗಿದೆ, ಹೊರಡೋಣ ?'

11

# ಭಾನು ಬವಣೆ

**ವಿಜಯಾ ಸಚ್ಚಿದಾನಂದ**

---

ಭಾನುಗೆ ಅವಳ ಪತಿ ಅರಸಿಕ ಅಂತ ಮದುವೆಯಾದ ಕೆಲವೇ ಸಮಯಗಳಲ್ಲಿ ಗೊತ್ತಾಯಿತಂತೆ. ಭಾನು ಯಾರು ಅಂತೀರಾ ? ನನ್ನ ಚಿಕ್ಕಂದಿನ ಸ್ನೇಹಿತೆ. ಅವಳನ್ನ ಕಂಡು ತುಂಬಾ ವರ್ಷಗಳಾಗಿದ್ದವು. ಮೊನ್ನೆ ನೋಡಿದಾಗ ಇಬ್ಬರಿಗೂ ತುಂಬಾ ಖುಷಿ. ಗಂಟೆಗಟ್ಲೆ ಮಾತಾಡಿದೆವು. ಆವಾಗಲೇ ಆವಳು ಅದನ್ನ ನನಗೆ ಹೇಳಿದ್ದು. "ಯಾಕೆ" ಅಂತ ನನ್ನ ಮರುಪ್ರಶ್ನೆ. "ಅಲ್ಲಾ ಕಣೆ, ನಾವು ಮದುವೆ ಆಗ್ತಿದ್ದಾಗೆ ಪಟ್ನಾ—ಅಂದರೆ ಶ್ರೀರಂಗಪಟ್ಟಣ ಅಲ್ಲ—ಬಿಹಾರಿನ ರಾಜಧಾನಿ ಪಟ್ನಾದಲ್ಲಿದ್ದಾಗ ಪಕ್ಕದ ಮನೆಯಲ್ಲಿ ನಮ್ಮ ಹಾಗೇ ಹೊಸದಾಗಿ ಮದುವೆಯಾದ ದಂಪತಿ ಇದ್ದರು. ಆಕೆ ತನ್ನ ಗಂಡನ್ನ 'ಕಿರಣ್' ಎಂದು ಕೂಗಿದರೆ ಒಳ್ಳೇ ಬೆಳ್ಳಿ ಗಂಟೆ ನಿನಾದವಾದಂತೆ ಅನ್ನಿಸುತ್ತಿತ್ತು. ಹಾಗೆ ಇವರನ್ನ "ಗುಂಡ್" ಅಂತ ಕರೆಯೋಣ ಅಂತ ಕರೆದರೆ ಒಳ್ಳೆ ಎಮ್ಮೆ ಅಟ್ಟಿದ ಹಾಗೆ ಆಗುತ್ತಿತ್ತು. ಅದಕ್ಕೆ ರೀ ! ನಿಮ್ಮ ಹೆಸರನ್ನ ಬದಲಾಯಿಸಿಕೊಳ್ಳಿರೀ, ಕರೆಯೋಕ್ಕೆ ಸುಲಭವಾಗೋ ಹಾಗೆ! ಅಂತ ಪ್ರೀತಿಯಿಂದ ವೈಯ್ಯಾರವಾಗಿ ಅಂದ್ರೆ, ಲೇ, ಸಾಕು ನಿನ್ನ ಪುರಾಣ ! ತಿನ್ನೋಕ್ಕೇನಾದರೂ ಹಾಕು. ಹೊಟ್ಟೆ ಹಸಿವು ಅನ್ನೋದೆ !

"ಸರಿ ! ಅದೇನು ನನಗೆ ಹೊಸದೇ ಆತನ ಹೊಟ್ಟೆ ಹಸಿವಿನ ರೋಗ ? ಅಲ್ಲಾ ಕಣೆ; ನಮ್ಮ ಮದುವೆನಲ್ಲಿ ಭೂಮಕ್ಕಿ ಅಂತ ದೊಡ್ಡ ಎಲೆ ಹಾಕಿ, ಚೆನ್ನಾಗಿ ಬಣ್ಣದ ರಂಗೋಲಿ ಇಟ್ಟು, ಹಣತೆ ದೀಪ ಹಚ್ಚಿ, ಬಗೆ ಬಗೆಯ ಭಕ್ಷ್ಯ ಎಲ್ಲ ಬಡಿಸಿ ಅಲಂಕಾರ ಮಾಡ್ತಾರೆ ನೋಡು. ಹಾಗೇ ಎಲ್ಲಾ ಮಾಡಿ, ಜೊತೆ ಜೊತೆಯಾಗಿ ಊಟಕ್ಕೆ ಬನ್ನಿ ಅಂತ ಎಲ್ಲಾರೂ ನಮ್ಮಿಬ್ರನ್ನೂ ಕರೆಯೋಣ ಅಂತ ಇದ್ರೆ, ಇವರು ಎಲ್ಲಾರಿಗಿಂತಾ ಮೊದಲೇ ಎಲೆ ಮುಂದೆ ಕೂತ್ಕೊಂಡು ಬಿಸಿ ಅನ್ನ, ಸಾರು ಹಾಕಿಕ್ಕೊಂಡು ಪೊಗದಸ್ತಾಗಿ ಕಲಸಿ, ತುತ್ತನ್ನು ತೂಗಿ ಬಾಯಿಗೆ ಎಸ್ಕೊಂಡಿದ್ರೂ ಎಸೆದುಕೊಂಡಿದ್ದೆ ! ಅಲ್ಲಿದ್ದೋರೆಲ್ಲಾ ಈತನ ಆತುರ ಕಂಡು ಮುಸಿ ಮುಸಿ ನಕ್ಕರು. ಇವರನ್ನು ನೋಡಿ ನಕ್ರೆ ತಲೆ ತಗ್ಗಿಸಿದ್ದು ನಾನು ಕಣೆ. ಅಲ್ಲಿ ನೆರೆದೋರೆಲ್ಲಾ ಲೆ ! ಭಾನೂ ! ನಿಮ್ಮಜವಾನರಿಗೆ ಏನಾದರೂ ತಿನ್ನಿಸೇ ಅಂತ ಅಂದಾಗ ನಾನು ಮೆಲ್ಲನೆ ಸಂಕೋಚದಿಂದ ಮೀನಾಕುಮಾರಿ ಭಂಗಿಯಲ್ಲಿ ಚಕ್ಕುಲಿ ತಿನ್ನಿಸ ಹೋದರೆ—'ಅಯ್ಯೊ!

ಅದೇನ್ಬಾಯಿಗೆ ಹಾಕ್ತೀಯೋ. ಹಾಕು ಬೇಗ! ಅದೇನು ವಯ್ಯಾರ ನಿಂದು! ಅನ್ನ, ಸಾರು ಎಲ್ಲಾ ಆರಿ ಹೋಗುತ್ತೇ' ಅಂತ ಕೈಯಿಂದಾನೇ ಕಿತ್ತುಕೊಂಡು ಗಬಕ್ ಅಂತ ಬಾಯಿಗೆ ಹಾಕಿಕೊಳ್ಳೋದೇ! ಹೊಸದಾಗಿ ಮದುವೆಯಾದೋರು ಅಂತಾನೂ ಇಲ್ವಲ್ಲೇ! ಅಂತ ಹಳೆ ಕಥೇನ ನೆನೆಸಿಕೊಂಡು ಸಿನಿಮಾ ನಟಿ ರೇಖಾಳ ಭಂಗಿಯಲ್ಲಿ ಕಣ್ಣು ಒರೆಸಿಕೊಂಡಳು.

ಎಲಾ ಇವಳಾ! 40 ವಸಂತಗಳು ಕಂಡಿದ್ದರೂ ಇವಳು ಸಿನಿಮಾ ನಟಿಯರ ಅನುಕರಣೆ ಬಿಡಲಿಲ್ಲವಲ್ಲಾ ಅಂತ ಅಂದುಕೊಂಡೆ. ಆಗಿನ ಕಾಲದಲ್ಲಿ ಸಿನಿಮಾನು ಕರಣೆಗೆ ಕಾಲೇಜಿನಲ್ಲೇ ಪ್ರಸಿದ್ಧಿ ಇವಳು.

ಶ್ರೀಮರ್ಾ ಗುಂಡನಿಗೆ ಪಟ್ನಾದಿಂದ ದೆಹಲಿಗೆ ವರ್ಗಾವಣೆ ಆದಾಗ ಎಲ್ಲರಿಗಿಂತಾ ಅಂದರೆ ಅವಳ ಟೀನ್ಸ್‌ನಲ್ಲಿದ್ದ ಮಗ, ಮಗಳಿಗಿಂತ ಸಂತೋಷವಾದದ್ದು ಅವಳಿಗೆ ಅಂತೆ! ಥೂ! ಇದುವರೆವಿಗೂ ಹಾಳುಕೊಂಪೆಯಲ್ಲಿ ವಾಸ ಮಾಡಿ ಆಯ್ತು. ಆಹಾ! ಈವಾಗ ಡೆಲ್ಲಿ–Capital–ಏನು ಸಾಧಾರಣವೇ? ಅದರಲ್ಲಂತೂ ಆ Furnished quaters ಕಂಡು ಸ್ವರ್ಗಕ್ಕೆ ಮೂರೇ ಗೇಣು! ಎಲ್ಲಾ ಸರಿ. ಆದರೆ ಆ ಸ್ವರ್ಗದಂತಹ ಮನೇಲಿ ತಾನು ವಾಸ ಮಾಡಲು ನಾಲಾಯಕ್ಕು ಅನ್ನಿಸಿಬಿಡ್ತಂತೆ. ಆ ಉದ್ದ ಜಡೆನೋ, ಆ ಸೀರೆ ರವಿಕೆಯೋ ಅದನ್ನ ನೋಡಿದರೆ ಬೇಜಾರಾಗೋದಂತೆ! ಟೀನ್ಸ್‌ನಲ್ಲಿದ್ದ ಮಕ್ಕಳು ಜೀನ್ಸ್, ಟೀ ಶರ್ಟ್‌ಗಳಲ್ಲಿ ತುಂಬಾ ಸೊಗಸಾಗಿದ್ದಾರೆ ಅನ್ನಿಸೋದಂತೆ. ಗುಂಡಾನೂ Winter ನಲ್ಲಿ ಸೂಟ್‌ಬೂಟ್ ಹಾಕ್ಕೊಂಡಾಗ ಸ್ಮಾರ್ಟ್ ಆಗೇ ಕಂಡರಂತೆ. ಶೇಕ್ಸ್‌ಪಿಯರ್ ಮಹಾಕವಿ ಹೇಳಲಿಲ್ಲವೇ, ಅಯ್ಯೋ! ಹೆಸರಿನಲ್ಲೇನಿದ ಮಹಾ! ರೋಸ್‌ಅನ್ನ ಯಾವ ಹೆಸರಿನಲ್ಲಿ ಕರೆದರೂ ಅದು ಸುವಾಸನೆ ಬೀರೇ ಬೀರೋದು ನಿಜ ಅಂತ ಅಂದುಕೊಂಡಳಂತೆ! ಎಲ್ಲಾದಕ್ಕಿಂತ ಅವಳಿಗೆ ತನ್ನ ಸೊಂಟದುದ್ದದ ಕೂದಲನ್ನ ಕಂಡರೆ ಅಸಹ್ಯವೆನ್ನಿಸುತ್ತಿತ್ತಂತೆ. ಅದನ್ನ ಹೇಗಾದರೂ Stylish ಆಗಿ ಕತ್ತರಿಸಿಬಿಡೋಣ ಎಂದರೆ ಧೈರ್ಯವಿರಲಿಲ್ಲವಂತೆ. ಫಿಲಂಫೇರ್, ಸಿನೆಬ್ಲಿಜ್‌ಗಳನ್ನೆಲ್ಲಾ ತಂದು ಅದರಲ್ಲಿದ್ದ ತಾರೆಯರ Hair styleಗಳನ್ನು study ಮಾಡಿ ಕನಸು ಕಾಣೋದೊಂದೇ Hobby ಆಯ್ತು.

ಒಂದು ದಿನ ಅವಳ ಮಗಳ ಸ್ನೇಹಿತೆ–ತುಮ್ಹಾರಿ ಮಮ್ಮಿಕಿ ಬಾಲ್ (ನಿನ್ನಮ್ಮನ ಕೂದಲು)–ಅಂದಿದ್ದು ಕೇಳಿಸಿಕೊಂಡು "ಏನೇ ನಿನ್ನ ಫ್ರೆಂಡ್ ನನ್ನ ಕೂದಲನ್ನು ಹಾಸ್ಯ ಮಾಡುತ್ತಿದ್ದಳು. ಹಾಗೆಲ್ಲಾ ಅಂದರೆ ಹುಷಾರ್, ಅವಳನ್ನು ತದುಕಿ ಹಾಕಿ ಬಿಡ್ತೀನಿ" ಅಂತೇಲ್ಲಾ ಹಾರಾಡಿದಳಂತೆ. ಅದಕ್ಕೆ ಅವಳ ಮಗಳು, "ಇಲ್ಲಮ್ಮಾ! ನಿಮ್ಮಮ್ಮನಿಗೆ ಎಷ್ಟುದ್ದ ಕೂದಲು ಅಂದಳಷ್ಟೆ! ಅಂತ ಎಷ್ಟು ಹೇಳಿದರೂ ಕೇಳಲಿಲ್ಲಿವಂತೆ. ಇನ್ನಾರಿಗೆ ತಾಯಿಯ ಆಸೆ ಆಕಾಂಕ್ಷೆಗಳು ಗೊತ್ತಾಗದಿದ್ದರೂ

ಹೆಣ್ಣು ಮಕ್ಕಳಿಗೆ ಗೊತ್ತಾಗುವುದಿಲ್ಲವೇ ? ಅವಳ ಮಕ್ಕಳಿಗೆ ಇವಳ ಆಸೆ ಗೊತ್ತಾಗಿತ್ತಂತೆ. ! ಅಮ್ಮಾ ! ನಿನಗಿಷ್ಟವಾದರೆ ಯಾತಕ್ಕೆ ಕೂದಲು ಕಟ್ ಮಾಡ್ಕೋಬಾರದು! ಈಗೆಲ್ಲಾ ಮಾಡ್ಕೋತಾರಲ್ಲಾ ! ಯಾರಿಗ್ಯಾಕೆ ಹೆದರ್ಬೇಕೇ" ಅಂತ ಅಂದಳಂತೆ. ಮೊದಲು ಇಲ್ಲಾ, ಇಲ್ಲಾಂತ ಅಂದರೂ ಹೌದು, ಯಾಕಾಗಬಾರದು ಅಂದ್ಕೊಂಡು ಕನಾಟ್ ಪ್ಲೇಸ್‌ಗೆ ಹೊರಟೇ ಬಿಟ್ಟಳಂತೆ. ಸರಿ, ಕನಾಟ್ ಪ್ಲೇಸ್‌ನಲ್ಲೇನು ಬ್ಯೂಟಿ ಪಾರ್ಲರ್‌ಗೆ ಕೊರತೆಯೆ ? ಮೊದಲು ಸಿಕ್ಕಿದ್ದೊಂದಕ್ಕೆ ನುಗ್ಗೇ ಬಿಟ್ಟಳಂತೆ! ಅಲ್ಲಿ ಆಗಲೇ ಬೇಕಾದಷ್ಟು ಜನ ಸೇರಿದ್ದರು. ಇವಳೂ ಅವರ ಜೊತೆಯಲ್ಲಿ ಕೂತಳು. ಸ್ವಲ್ಪ ಹೊತ್ತಿಗೆಲ್ಲಾ ಒಬ್ಬಳು ಹುಡುಗಿ ಬಂದು ಇವಳನ್ನು ಒಳಗೆ ಕರೆದುಕೊಂಡು ಹೋದಳಂತೆ. ಆಮೇಲೆ ಒಂದು ದೊಡ್ಡ ಕುರ್ಚಿ ಮುಂದೆ ಕೂರಿಸಿದಳಂತೆ. ಮುಂದೆ ಒಂದು ದೊಡ್ಡ ಕನ್ನಡಿ ಬೇರೆ. ಇವಳ ಕತ್ತಿನ ಮೇಲೆ ಒಂದು ದೊಡ್ಡ ಬಿಳಿ ಬೆಡ್ ಶೀಟ್ ಹಾಕಿದಳಂತೆ. ಆಮೇಲೆ ಬಂದಳು ಚೀನಿ ಹಜಾಮಿ ಬಲಗೈಲಿ ಕತ್ತರಿ ಎಡಗೈಲಿ ಬಾಚಣಿಗೆ ಹಿಡಿದು. ನಿನಗೆ ಹ್ಯಾಗೆ ಬೇಕು ಅಂದಳಂತೆ. ನನಗೆ Suit ಆಗೋ ಹಾಗೆ ಕಟ್ ಮಾಡು ಅಂದಳಂತೆ. ಆಮೇಲೆ ಒಳ್ಳೆ ಮೃದುವಾಗಿ ಬಾಚಲು ಶುರು ಮಾಡಿದಳಂತೆ. ಆಹಾ ! ಭಾನೂಗೆ ಹಾಗೇ ಕಣ್ಣು ಹತ್ತಿತಂತೆ. ಒಂದು ಪುಟ್ಟ ಕನಸು...... ಡಿಂಪಲ್ ಕಪಾಡಿಯಾ ತರಹನೇ ಕಾಣುತ್ತಿದ್ದಾಳೆ, ನೀಟಾಗಿ ಡ್ರೆಸ್ ಮಾಡಿಕೊಂಡು ಹೋಗುತ್ತಾ ಇದ್ದಾಳೆ. ಎಲ್ಲರೂ ಡಿಂಪಲ್, ಡಿಂಪಲ್ ಅಂತೆ ಮಾತಾಡ್ಕೋತಾ ಇದ್ದಾರೆ. ಎಲ್ಲಿ ಡಿಂಪಲ್ ಅಂತ ತಿರುಗಿ ನೋಡುತ್ತಾಳೆ. ಎಲ್ಲಾರೂ ಇವಳನ್ನೇ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಆಹಾ ! ಅಂತ ಕಣ್ಣು ಬಿಟ್ಟು ನೋಡ್ತಾಳೆ. ಅಷ್ಟರಲ್ಲಿ "ಅಯ್ಯೋ" ಅಂತ ತಲೆ ಮೇಲೆ ಕೈಯಾಡಿಸಿದಳಂತೆ. ಅವಳ ಸೊಂಟದುದ್ದದ ಕೂದಲು ನೆಲದ ಮೇಲೆಲ್ಲಾ ಹರಡಿದೆ. ಆ ಚೀನಿ ಹಜಾಮಿ ಇನ್ನೇನಾದರೂ ಒಂದೈದು ಸಲ ತಲೆ ಮೇಲೆ ಕತ್ತರಿ ಆಡಿಸಿದ್ದರೆ ಹಳ್ಳೀಲಿರೊ ನಾಗಜ್ಜಿ ಕೆಂಪು ಸೀರೆಯ ಮುಸುಕಿನ ಕೆಳಗಿನ ತಲೇನ Resemble ಆಗಿರೋದಂತೆ "ಇಷ್ಟೇ ಸಾಕು ! ಇನ್ನು ಬೇಡ" ಅಂದಳಂತೆ. ಆ ಕೂದಲನ್ನೇ ಇನ್ನೊಂದು ಸ್ವಲ್ಪ Trim ಮಾಡಿ ಕನ್ನಾಡೀನ ಹಿಂದು ಮುಂದು ಇಟ್ಟು ಚೆನ್ನಾಗಿದೆಯೇ ಅಂತ ಕತ್ತಾಡಿಸಿ 50 ರೂ. ಕಿತ್ಕೊಂಡು ಕಳುಹಿಸಿದಳು. ಒಂದು ತರಹ ಚೆನ್ನಾಗಿಯೇ ಕಾಣಿಸಿದಳಂತೆ ಭಾನು.

"ಸಿರ್ ಭೀ ಹಲ್ಕಾ, ದಿಲ್ ಭೀ ಹಲ್ಕಾ, ಪರ್ಸ್ ಭೀ ಹಲ್ಕಾ" ಅಂತ ಅರ್ಥಾತ್ ತಲೇನೂ ಹಗುರ, ಹೃದಯ ಹಗುರ, ಪರ್ಸ್ ಸಹ ಹಗುರ ಅಂತ ಅರ್ಥವಿಲ್ಲದ ಹಾಡು ಗೊಣಗುತ್ತಾ, ಯಾಕೆಂದರೆ ಒಂದು ತರಹ ನಾಚಿಕೆ ಸಂಕೋಚ ಎಲ್ಲಾ ಆಗ್ತಿತ್ತಲ್ಲಾ, ಅದನ್ನ ಮುಚ್ಚಿಟ್ಟುಕೊಳ್ಳೋದಕ್ಕೇ ಕನಾಟ್ ಪ್ಲೇಸೆಲ್ಲಾ ತಿರುಗಿದಳಂತೆ. ಎಲ್ಲಾ ಅಂಗಡಿಯೋರೂ "ಆಯಿಯೆ ಮೇಮ್‌ಸಾಬ್" ಅಂತ ಕರೆದರಂತೆ. ಇದೇನಿದು ? "ಆಯಿಯೆ ಮಾಯಿಜೀ" ಅನ್ನಬೇಕಾದೋರು ಮೇಮ್‌ಸಾಬ್

ಅಂದರೆ ಅದು ಕೂದಲ ಮಹಿಮೆಯೇ ಅಂತ ಗೊತ್ತಾಯ್ತಂತೆ. ಅಷ್ಟು ಕರೀಬೇಕಾದರೆ ಏನಾದರೂ ಕೊಂಡುಕೊಳ್ಳದೇ ಇರೋದಕ್ಕೆ ಸಾಧ್ಯವೇ ? ಆದರೆ ಪರ್ಸ್ ಭೀ ಹಲ್ಕಾ ಆಗಿತ್ತಲ್ಲಾ ! ಒಂದಂಗಡೀಲಿ "ಕಾವೇರಿ Pickle" ನೋಡಿದಳಂತ. ಅದನ್ನೇ ಎರಡು ಬಾಟ್ಲಿ ಕೊಂಡು ಮನೆಗೆ ಬಂದಳು. ಮನೆಯ ಹತ್ತಿರದಲ್ಲೇ Mr. ಮಲ್ಹೋತ್ರ ಸಿಕ್ಕಿದರಂತೆ. ಯಾರ ಹತ್ತಿರಾನೂ ಮಾತಾಡದೇ ಇರೋ ಆತ ಭಾನೂನ ನೋಡಿ, "Hallo, ಮಿಸೆಸ್ ಗುಂಡುರಾವ್. What a surprise ! How are you ?" ಅಂತ ಇವಳ ತಲೆ ಕಡೇಗೆ ನೋಡಿದರಂತೆ. ಹಿಂದೇನೆ ಬಂದ ಮಿಸೆಸ್ ಮಲ್ಕಾನಿ "ಕ್ಯಾ ಬಹೆನ್ ! ಕಿತನಿ ಅಚ್ಛೀ ಲಗ್‌ತೀ ಹೋ. ದಸ್ ಸಾಲ್ ಛೋಟೀ ಲಗತೀ ಹೋ" (ಏನು ಸೋದರಿ, ಎಷ್ಟು ಚೆನ್ನಾಗಿದ್ದಿ ಹತ್ತು ವರ್ಷ ಚಿಕ್ಕವಳಾಗಿ ಕಾಣುತ್ತೀ !) ಅಂದರಂತೆ, ಟೀನೇಜ್ ಮಗಳು "ವಾವ್" ಅಂದಳಂತೆ.

ಇನ್ನೇನು ಗುಂಡ ಬರೋ ಹೊತ್ತು. ಉಪ್ಪಿನಕಾಯಿ ಸೀಸೆನ ಅಲ್ಲೇ ಇದ್ದ Dining table ಮೇಲೆ ಕುಕ್ಕಿದಳು. ಒಳಗೆ ಹೋಗಿ ಮುಖ ತೊಳೆದು ಡ್ರೆಸ್, ಮೇಕಪ್, ಮೂಗ್ ಬಟ್, ಬಾಬ್ ಕಟ್ ಸಮೇತ ಮೋಹಕವಾಗಿ, ಹೇಮಮಾಲಿನಿ "ಜಾನಿ ಮೇರಾ ನಾಮ್"ನಲ್ಲಿ ದೇವಾನಂದ್‌ಗಾಗಿ ಕಾಯ್ತಾ ನಿಂತ್ಕೋತಾಳಲ್ಲಾ, ಹಾಗೆ ನಿಂತು ಕೊಂಡಳಂತೆ ! ಗುಂಡಾ ಬಂದ, ಹೆಂಡತೀನ ಕಂಡ. ಅವನನ್ನ ನೋಡು ತ್ತಿದ್ದ ಹಾಗೇ ಭಾನು ಟೀನೇಜ್ ಮಗಳ ತರಹ "ವ್ಹಾಟ್ಸ್ ನ್ಯೂ ?" ಅಂದಳು. ತಲೆ ಮೇಲೆ ಬೇರೆ ಕೈಯಾಡಿಸಿದಳು. ಗುಂಡ ಸುತ್ತಲೂ ಕಣ್ಣು ತಿರುಗಿಸಿದ. ಎಲ್ಲಾ ಕಡೆಯೂ ನೋಡಿದ, ನೋಡೇ ನೋಡಿದ. ಕೊನೆಗೆ ಕಣ್ಣು ಆ ಡೈನಿಂಗ್ ಟೇಬಲ್ ಮೇಲೆ ಬಿತ್ತು. ಮುಗುಳ್ನಕ್ಕ. ಬ್ರೀಫ್‌ಕೇಸ್ ಅಲ್ಲೇ ಎಸೆದು ಬೇಗ ಹೋಗಿ ಬಾಟ್ಲಿ ಗಳನ್ನು ಹಿಡಿದು "ಉಪ್ಪಿನ ಕಾಯಿ ನ್ಯೂ" ಅಂದ.

ಪಾಪ ! ಭಾನು ಸುಸ್ತು ! ಭಾನೂನೆ ಏನು, ಅದನ್ನ-ಕೇಳಿ ನಾನೂ ಸುಸ್ತು !!

# "ಸರ್ವೇ ಸುಖಿನೋ ಭವ–"

**ಸೀ. ಆರ್. ಸತ್ಯ**

---

ಸರ್ವೇ ಸುಖಿನೋ ಭವಂತು ! ಆಹಾ ! ನಮ್ಮ ಪೂರ್ವಜರು ನಿಜವಾಗಿಯೂ ಪುಣ್ಯ ವಂತರು. ಶಾಂತಿ, ಸುಖ ಎನ್ನುವುದು ಮೊದಲು ಸರ್ವವ್ಯಾಪ್ತಿಯಾಗಿ ಎಲ್ಲೆಡೆಯೂ ಹರಡಿದರೆ ತಾನೆ ವೈಯಕ್ತಿಕವಾಗಿ ನಮಗೆಲ್ಲಾ ದೊರಕುವುದು ? ಅದರಿಂದಾ ಅವರು ಎಲ್ಲರಿಗೂ (ಅಂದರೆ ನಮಗೆ, ನಿಮಗೆ, ಪಕ್ಕದ ಮನೆಯವರಿಗೂ ಸೇರಿ ಅಂತ ಅರ್ಥ) ಸುಖ ಹರಿಸಿದರು. ಈ ವಾಕ್ಯಗಳನ್ನು ನುಡಿದ ಆ ಪೂರ್ವಜರ ಮನಸ್ಸು ತಾನೇ ಎಷ್ಟು ದೊಡ್ಡದಾಗಿರಬೇಕು! ಈಗ, ನಿಮ್ಮ ಸುತ್ತಮುತ್ತ ಇರುವವರೆಲ್ಲರೂ ಅಶಾಂತಿ ಯಿಂದ ಪರದಾಡಿಕೊಂಡಿದ್ದು, ನೀವೊಬ್ಬರೇ ಸುಖವಾಗಿ ಇರ್ತೀನಿ ಅಂತ ಬಯಸಿದರೆ ಅದು ಸಾಧ್ಯವೆ ? ಪುಣ್ಯಾತ್ಮರು ! ಪುಣ್ಯಾತ್ಮರು !

ಈ ಮೇಲ್ಕಂಡ ಗುಂಗಿನಲ್ಲಿ ಈಚೀಚೆಗೆ ನಾನು ನಮ್ಮ ಬಡಾವಣೆಯ ಚಿಕ್ಕ ಬೆಟ್ಟದ ಮೇಲೆ, ಹೋದ ವಾರ ಹೊಸದಾಗಿ ಸ್ಥಾಪಿತವಾದ ವೆಂಕಟರಮಣಸ್ವಾಮಿ ಗುಡಿಗೆ ಒಂದು ದಿನ ಸಂಜೆ ನುಗ್ಗಿದೆ. ಸುಮಾರು ನೂರು ಮಂದಿಯಷ್ಟು ಭಕ್ತಾದಿ ಗಳು ನೆರೆದಿದ್ದರು. ಎಲ್ಲರೂ ಅರ್ಚನೆ ಹಾಗೂ ಇತರೆ ಸೇವೆ ಟಿಕೆಟ್ಟುಗಳನ್ನ ಒಳಗೆ ಕೊಟ್ಟು ಮಂಗಳಾರತಿಗೆ ಕಾಯುತ್ತಿದ್ದ ಹಾಗೆ ತೋರಿತು. ಅರ್ಚಕರು ಪೂಜಾ ವಿಧಿ ಗಳಲ್ಲಿ ತೊಡಗಿದ್ದರು. ಅವರ ಮಂತ್ರ ಪಠಣೆಯೊಂದಿಗೆ ಲೌಡ್ ಸ್ಪೀಕರ್‌ನಲ್ಲೂ ಯಾರದ್ದೋ ನಾದಸ್ವರ ವಾದನ ತೇಲಿ ಬರುತ್ತಿತ್ತು. ಇನ್ನು ನಮ್ಮ ಲಾರ್ಡ್ ವೆಂಕಟರಮಣ ಗರ್ಭಗುಡಿಯೊಳಗೆ ವಜ್ರ ವೈಢೂರ್ಯಗಳಿಂದ ಅಲಂಕೃತನಾಗಿ ಪಳಕುತ್ತಾ ಫೋಟೋಗೋ ಎಂಬಂತೆ ಸಾಮ್ಯವದನನಾಗಿ ಕಾಯುತ್ತಾ ನಿಂತಿದ್ದ. ಇಂತಹ ಆಹ್ಲಾದಕರ ವಾತಾವರಣದಲ್ಲಿ ನನ್ನ ಮನಸ್ಸೂ (ನಮ್ಮ ಪೂರ್ವಜರಿಗಾದ ಹಾಗೆ) ಒಂದು ತರಹ ಪುಳುಕಿತು ಅನ್ನಿ. ತಕ್ಷಣವೇ "ಅಪ್ಪಾ, ವೆಂಕಟರಮಣ ! ಸರ್ವೇ ಸುಖಿನೋ ಭವಂತು ! !" ಅಂತಾ ಜೋರಾಗಿ ಕೂಗ್ತಾನೇ ಸಾಷ್ಟಾಂಗ ನಮಸ್ಕಾರಕ್ಕೆ-ಕೆಳಕ್ಕೆ ಬಿದ್ದೆ.

ಮರುಕ್ಷಣವೇ ದೇವಸ್ಥಾನವೆಲ್ಲಾ ಏನೋ ಗರಬಡಿದ ಹಾಗೆ ನಿಶ್ಶಬ್ದವಾಗಿ ಹೋಯಿತು! ಅರ್ಚಕರು ಮಂತ್ರ ಜಪವನ್ನೇ ನಿಲ್ಲಿಸಿದರೆ ಯಾರೋ ನಾದಸ್ವರವನ್ನೂ ಆಫ್ ಮಾಡಿದರು. ತಮ್ಮ ತಮ್ಮಲ್ಲೇ ಮಾತಾಡ್ತಿದ್ದ ಭಕ್ತಾದಿಗಳೂ ಮೌನವಾಗಿ ಹೋಗ್ಬೋದೇ ! ನಾನು ಮೆಲ್ಲಗೆ ಬ್ಯಾಲನ್ಸ್ ಮಾಡಿಕೊಂಡು ಎದ್ದೆ. ಎರಡೇ ನಿಮಿಷ

ಗಳ ಹಿಂದೆ ಕಿವಿ ಮೂಗು ಹಿಡಿದುಕೊಂಡು ಗರ್ಭಗುಡಿಯ ಕಡೆ ಗಮನವಿಟ್ಟು ಕೊಂಡಿದ್ದ ಭಕ್ತಾದಿಗಳೆಲ್ಲಾ ಈಗ ನನ್ನ ಸುತ್ತಲೂ ನಿಂತ್ಕೊಂಡು ನನ್ನನ್ನೇ ದುರು ಗುಟ್ಟಿಕೊಂಡು ನೋಡ್ತಿದ್ದ ಹಾಗೆ ಕಾಣಿಸ್ತು. ನಾನೇನಪ್ಪ ತಪ್ಪು ಮಾಡಿದೆ ಅಂತ ನನ್ನ ಎದೆ ಢವಗುಟ್ಟಿತು!

ಅಷ್ಟರಲ್ಲಿ ಒಬ್ಬ ಧಡೂತಿ ಭಕ್ತ (ಇಲ್ಲೀ ತನಕ ಇವನೊಬ್ಬ ಗ್ರಾನೈಟ್ ಪಿಲ್ಲರ್ ಅಂತ ನಾನು ಅಂದ್ಕೊಂಡಿದ್ದೆ) ನನ್ನ ಕಾಲರ್‌ಗೇ ಕೈ ಹಾಕಿ ಹಿಡಿದ. "ಯಾಕಪ್ಪಾ ದೊರೆ, ನಿನ್ನ ಪಾಡಿಗೆ ನೀನು ಇರೋದನ್ನ ನಿಮ್ಮ ಅಪ್ಪ ಅಮ್ಮ ಹೇಳ್ಕೊಟ್ಟಿಲ್ವಾ?" ಅಂದ. ಸ್ವಲ್ಪ ದೂರದಲ್ಲೇ ನಿಂತಿದ್ದ ಒಂದು ಸಲ್ವಾರ್ ಕಮೀಜ್ "ಮೈಂಡ್ ಯುವರ್ ಓನ್ ಬಿಸಿನೆಸ್, ಮಿಸ್ಟರ್!" ಅಂತ ಆ ಧಡೂತಿ ಹೇಳಿದ್ದನ್ನೇ ಇಂಗ್ಲಿಷ್‌ಗೆ ತರ್ಜುಮೆ ಮಾಡ್ತು! ಇನ್ನೊಂದು ಕರಿ ಬಾರ್ಡರ್ ಮಾಯಾವರಂ ನಾರಿ "ನೋಡೋಕ್ಕೆ ಪೆದ್ದು ಪೆದ್ದಾಗಿ ಕಾಣ್ತಾನೆ. ಇನ್ನೊಬ್ಬರ ವಿಷಯದಲ್ಲಿ ಮೂಗು ಹಾಕೋದೊಂದು ಗೊತ್ತು ಅಂತ ಕಾಣುತ್ತೆ!" ಅಂತ ಆರ್ಭಟಿಸಿತು. ಅದರ ಪಕ್ಕ ದಲ್ಲೇ ನಿಂತಿದ್ದ ಒಂದು ಕಲಾಬತ್ತಿನ ಪಂಚೆ "ಇದು ದೇವಸ್ಥಾನದ ಪ್ರಾಕಾರ. ಆದ್ದರಿಂದ ನೀನು ಬದುಕ್ಕಿದ್ದೀಯಾ. ಇಲ್ಲದಿದ್ದರೆ ಈ ವಾಕಿಂಗ್ ಸ್ಟಿಕ್‌ನಲ್ಲೇ ನಿನ್ನ ತಲೇನಾ ಎರಡು ಚೂರು ಮಾಡ್ತಿದ್ದೆ ರ್‍ಯಾಸ್ಕಲ್!" ಅಂತ ಗುಡುಗಿತು.

ನಾನು ಒಂದೂ ಅರ್ಥವಾಗದೆ ಬಾಯಿಬಿಟುಕೊಂಡು ನಿಂತೆ. ಆಗ ಅಲ್ಲಿದ್ದ ಆಸಿಡ್ ವಾಷ್ ಜೀನ್ಸ್ ಒಂದು "ಹೀಗೆ ಬಾಯಿ ಬಿಟ್ಕೊಂಡು ನಿಂತ್ಕೊಳ್ಳೋ ಬದಲು ಬಾಯಿ ಮುಚ್ಕೊಂಡು ನಿಂತ್ಕೊಳ್ಳೋದು ಕಲಿಯೋ ಪೆಕ್ರೆ!" ಅಂತ ಕೂಗಿದ, ನನ್ನ ಹಿಂದೆ ಇದ್ದ ಒಂದು ದಟ್ಟಿ ಪಂಚೆ "ಇವನಿಂದ ಇವತ್ತಿನ ಪೂರಾ ದಿನವೇ ಕೆಟ್ಹೋಯ್ತು ಬಿಡಿ" ಅಂತು ಬೇಸರದಿಂದ. ಒಮ್ಮತ ಎಂಬಂತೆ ಎಂಟೋ ಹತ್ತೋ ಗಂಟಲುಗಳು ಹೌದು! ಹೌದು!! ಅಂದವು. "ಈಚೀಚೆಗೆ ನಮ್ಮ ಬಡಾವಣೆಗೆ ಯಾರ್‍ಯಾರೋ ಬಂದು ಸೇರ್ಕೋತಾ ಇದಾರೆ. ಇಂತಹವರನ್ನ ಇಲ್ಲಿಂದ ಓಡಿಸಬೇಕು" ಇದು ಒಂದು ಬೆನಾರಸ್ ಕಾಟನ್ ಪ್ರತಿಕ್ರಿಯೆ. ಒಟ್ಟಿನಲ್ಲಿ ಡೀಸೆಂಟ್ ಕಂಪನಿ. ಸಧ್ಯ ನನ್ನ ಯಾರೂ ಬೆನ್ನಾಮುರಿ ತದಕಲಿಲ್ಲ.

ದೇವರ ದಯದಿಂದ ಅರ್ಚಕರು ಪರಿಸ್ಥಿತಿಯನ್ನ ಹತೋಟಿಗೆ ತಂದರು. "ನಡೀರಮ್ಮ, ನಡೀರಿ ಸ್ವಾಮಿ, ಪೂಜೆ ಮುಗಿಸ್ತೀನಿ ಬನ್ನಿ. ಇವನ ವಿಷಯ ಆಮೇಲೆ ವಿಚಾರಿಸ್ತೀನಿ" ಅಂತ ಅವರು ಕೂಗಿದ ಒಡನೆಯೇ ಆ ಭಕ್ತಾದಿಗಳೆಲ್ಲಾ ತಮ್ಮ ಗಮನವನ್ನ ದೇವರ ಕಡೆ ಹರಿಸಿದರು. ಸಧ್ಯ ಬದುಕಿದೆ! ಹಾಗೇ ಅಲ್ಲಿದ್ದ ಹುಂಡಿ ಡಬ್ಬದ ಪಕ್ಕ ಸುಸ್ತಾಗಿ ಕುಕ್ಕುರು ಬಡಿದೆ. ಐದೇ ನಿಮಿಷಗಳಲ್ಲಿ ಆ ಭಕ್ತಾದಿ

ಗಳೆಲ್ಲರೂ ಕರಗಿಯೇ ಹೋದರೂ ಅನ್ನಿ. ಅರ್ಚಕರೂ ತಮ್ಮ ದಿನ ನಿತ್ಯ ಡ್ಯೂಟಿ ಮುಗಿಸಿ ಗರ್ಭಗುಡಿಯ ಬಾಗಿಲು ಬಡಿದರು. ಶಾಲು ಹೊದ್ದು ಕೈಲಿ ಚೀಲವನ್ನ ಹಿಡಿದು ಮನೆಗೆ ಹೊರಟವರು ಹುಂಡಿ ಡಬ್ಬದ ಪಕ್ಕದಲ್ಲಿದ್ದ ನನ್ನನ್ನೆ ನೋಡಿ ಹಾಗೇ ನಿಂತರು. ನಾನು ಮೆಲ್ಲಗೆ ಎದ್ದೆ. "ನಿಮ್ಮ ಪೂಜೆ ಪುರಸ್ಕಾರದ ಮಧ್ಯೆ ಕರಡಿ ಬಿಟ್ಟ ಹಾಗೆ ಬಂದೆ. ನಾನು ಏನು ತಪ್ಪು ಮಾಡಿದೆ ಅಂತ ಇನ್ನೂ ಅರ್ಥವಾಗಿಲ್ಲ ಅರ್ಚಕರೇ" ಅಂದೆ.

ಪಾಪ, ಆತ ವಯೋವೃದ್ಧ. ಜೀವನದಲ್ಲಿ ಬಹಳವಾಗಿಯೇ ಪಳಗಿರೋ ವ್ಯಕ್ತಿ. ನನ್ನನ್ನ ನೋಡಿ ಕನಿಕರ ಹುಟ್ಟಿತು ಅಂತ ಕಾಣುತ್ತೆ. ನನ್ನ ಭುಜದ ಮೇಲೆ ಕೈ ಹಾಕಿ, "ಬಾ, ಈ ಕಟ್ಟೇಲಿ ಕೂತ್ಕೋ. ಹೇಳ್ತೀನಿ ನಿನ್ನ ತಪ್ಪು ಏನೂಂತ" ಅಂದರು. ನಾನೂ ಕಟ್ಟೇಲಿ ಕೂತೆ.

**ಅರ್ಚಕರ ಉವಾಚ :**

"ಸರ್ವೇ ಸುಖಿನೋ ಭವಂತು ಅಂತ ನೀನೇನೋ ದೇವರಿಗೆ ಹುಕುಂ ಕೊಟ್ಟೆ; ಅವನು ಅದನ್ನು ಪಾಲಿಸಿದಾ ಅಂತಾನೂ ಅನ್ನು. ಆಗ ಈ ಪ್ರಪಂಚ ಹೀಗೇ ಉಳಿಯುತ್ತೆ ಅಂತ ಅಂದ್ಕೊಡಿದೀಯಾ ? ನಿನ್ನ ಕಾಲರ್ ಹಿಡಿದಿದ್ದನಲ್ಲಾ ಆ ದೊಡ್ಡ ಮುನಿ (ಗ್ರಾನೈಟ್ ಪಲ್ಲರು), ಅವನು ಇವತ್ತು 501 ರೂಪಾಯಿ ಕೊಟ್ಟು ಸ್ವಾಮಿಗೆ ಬೆಣ್ಣೆ ಸೇವೆ ಮಾಡ್ಸೋಕ್ಕೆ ಬಂದಿದ್ದ. ಯಾಕೆ ಗೊತ್ತೆ ? ಅವ ಒಬ್ಬನಿಗೆ ಬಿಟ್ರೆ ಇನ್ಯಾರಿಗೂ ಆ ವಾಟರ್ ಟ್ಯಾಂಕ್ ಕಂಟ್ರ್ಯಾಕ್ಟ್ ದಕ್ಕದೇ ಇರಲಿ ಅಂತ ! ಈಗ ನಿನ್ನ ಕಿರುಲಾಟಕ್ಕೆ ಕಿವಿ ಕೊಟ್ಟು ನಮ್ಮ ವೆಂಕಟರಮಣಸ್ವಾಮಿ ದೊಡ್ಡಮುನೀನೂ ಸೇರಿ ಇನ್ನೂ ಹತ್ತು ಪುಲಿಗಳಿಗೆ ಕಂಟ್ರ್ಯಾಕ್ಟ್ ಕೊಡಿಸ್ತಾನೇ ಅಂತ ಇಟ್ಕೋ. ಆ ವಾಟರ್ ಟ್ಯಾಂಕ್ ಮೇಲಕ್ಕೆ ಬಂದ ಹಾಗೇನೇ, ಅದರಲ್ಲಿ ನೀರು ನಿಂತ ಹಾಗೇನೇ !

ಪಾಪ, ಆ ಎಳೇ ಹುಡುಗೀದೂ ಅದೇ ಕಷ್ಟ (ಸೆಲ್ವಾರ್ ಕಮೀಜ್). ನಾಳೆ ಇರೋ ಅಂತ ಇಂಟರ್‌ವ್ಯೂನಲ್ಲಿ ನನಗೊಬ್ಬಳಿಗೇ ಕೆಲಸ ದಕ್ಕಲಪ್ಪಾ. ಇಲ್ಲಿ ಬೆಳಗಿನಿಂದ ಹತ್ತು ಸಲ ಅರ್ಚನೆ ಮಾಡ್ಸಿದಾಳೆ. ಇನ್ನು ಆ ಸುಬ್ಬಲಕ್ಷಮ್ಮ (ಮಾಯಾವರಂ ಸೀರೆ!) ನಂತೂ, ತನ್ನ ಬಡಾವಣೆಯಲ್ಲಿ ಅವರ ಮಗಳಿಗೆ ಮಾತ್ರ ಮೆಡಿಕಲ್‌ನಲ್ಲಿ ಸೀಟು ಸಿಗಲಿ ದೇವರೆ ಅಂತ ಮಧ್ಯಾಹ್ನದಿಂದ ಇಲ್ಲೇ ಉಪವಾಸ ಕೂತಿದಾರೆ, ಯಜಮಾನರ ಜೊತೆಗೆ (ಓಹೋ, ಕಲಾಪತ್ತಿನ ಪಂಚೆ).

ಸರಿ, ಇನ್ನು ನಮ್ಮ ವಿವೇಕನ್ನ ನೀನೇ ನೋಡಿದೆ. ಅಂಗಡಿ ಶೆಟ್ಟರ ಮಗ (ಆಸಿಡ್ ವಾಷ್ ಜೀನ್ಸ್). ಅವನ ಕ್ಲಾಸ್‌ಮೇಟ್ ಹುಡುಗಿಯೊಂದನ

ಅವನೊಬ್ಬನೇ ಪ್ರೀತಿಸಬೇಕಂತೆ. ಅವಳು ಇನ್ಯಾರ ಕೈಯಲ್ಲೂ ಮಾತಾಡದ ಹಾಗೆ ಅವಳ ಬಾಯಿ ಕಟ್ಟಿಸಪ್ಪಾ ಅಂತ ಇವತ್ತು ಕಡುಬು ಸೇವೆ ಮಾಡ್ಸಿದಾನೆ ನೋಡು. ಮಿಕ್ಕದವರ ಕತೆಗಳೂ ಹೀಗೇನೇ ಮರಿ (ದಟ್ಟಿ ಪಂಚೆ, ಬೆನಾರಸ್ ಕಾಟನ್, etc.) ಅವರಲ್ಲಿ ಯಾರಿಗೂ ಪರರ ಸುಖ ಬೇಕಿಲಪ್ಪಾ ! ಅವರವರ ಸುಖಕ್ಕೆ ಇಲ್ಲಿ ಬಂದು ನಮ್ಮ ವೆಂಕಟರಮಣನ್ನ ಮೊರೆ ಹೊಕ್ಕೋದಲ್ಲದೇ, ಪಾಪ, ಆ ಸೇವೆ ಈ ಸೇವೆ ಅಂತ ಸ್ಪೆಶಲ್ ಅರ್ಚನೆ, ಅಲಂಕಾರ ಚೀಟಿಗಳಲ್ಲೂ ದುಡ್ಡು ಹಾಕಿದ್ದಾರೆ. ಈಚೀಚೆಗೆ ಈ ಚೀಟಿಗಳ ಬೆಲೆಗಳೂ ಸಿಕ್ಕಾಪಟ್ಟೆ ಏರಿವೆ. ಅಂತಹವರ ಮುಂದೆ ನೀನು ದೊಡ್ಡ ದೊಡ್ಡಾಗಿ ಸರ್ವೇ ಸುಖಿನೋ ಭವಂತು ಅಂತ ಜೋರಾಗಿ ಕೂಗಿಕೊಂಡರೆ ಅವರಿಗೆಲ್ಲಾ ಕೋಪ ಬರದೇ ಇನ್ನೇನು ಬರುತ್ತೆ ಅಂದ್ಕೊಂಡಿ? ಸರಿ, ಹೊರಡು ಇಲ್ಲಿಂದ. ಬೀಗ ಹಾಕೋ ಹೊತ್ತಾಯ್ತು !

# ಯಾರು ಹುಚ್ಚರು?

ಕಂಭಂ ಕೃಷ್ಣಮೂರ್ತಿ

---

ಕುರುಬರಹಳ್ಳಿಯಲ್ಲಿ ಪ್ರೈಮರಿ ಶಾಲೆಯಲ್ಲಿ ಮಾಸ್ತರನಾಗಿದ್ದ ನನ್ನನ್ನು ಅದ್ಯಾತಕ್ಕೆ ಬೆಂಗಳೂರಿನ ಮಹಾನಗರಕ್ಕೆ ವರ್ಗಾಯಿಸಿದರೋ ಆ ಶಿವನೇ ಬಲ್ಲ. ಹಳ್ಳಿಯ ವಾತಾವರಣಕ್ಕೆ ಒಗ್ಗಿ ಹೋಗಿದ್ದ ನಾನು ಈ ಮಹಾನಗರಕ್ಕೆ ಹೊಂದಿಕೊಳ್ಳುತ್ತೇನೆಯೆ ಎಂಬುದೇ ಒಂದು ದೊಡ್ಡ ತಲೆನೋವಾಗಿತ್ತು. ಗಂಟು ಮೂಟೆ ಕಟ್ಟಿಕೊಂಡು, ಬೆಂಗಳೂರಿಗೆ ಬಂದಿದ್ದೂ ಆಗಿತ್ತು, ಪ್ರೈಮರಿ ಶಾಲೆಗೆ ಪದಾರ್ಪಣ ಮಾಡಿ ಒಂದು ವಾರವೂ ಉರುಳಿತ್ತು.

ಕುರುಬರಹಳ್ಳಿ ಶಾಲೆಯಲ್ಲಿ, ಒಂದು ಲೆಕ್ಕ ಬೋರ್ಡಿನ ಮೇಲೆ ಬರೆದು, ರುಮಾಲನ್ನು ಮೇಜಿನ ಮೇಲಿರಿಸಿ, ತಲೆಯನ್ನು ಮೇಜಿಗೆ ಆನಿಸಿ, ಒಂದು ನಿದ್ದೆ ತೆಗೆದು, ಕಣ್ಣು ತರೆದಾಗ, ಇನ್ನೂ ಹುಡುಗರು ಲೆಕ್ಕ ಮಾಡುವುದರಲ್ಲೇ ತಿಣಕಾಡುತ್ತಿದ್ದರು. ಆದರೆ ಬೆಂಗಳೂರಿನ ಈ ಶಾಲೆಯಲ್ಲಿ, ಚೋಟುದ್ದದ ಹೈಕಳೂ, ಜೇಬಿನಲ್ಲೊಂದು ಗಣಕ ಯಂತ್ರವನ್ನು ಇಟ್ಟುಕೊಂಡೇ ಇರುತ್ತಿದ್ದರು. ನಾನು ಬೋರ್ಡಿನ ಮೇಲೆ ಲೆಕ್ಕ ಬರೆದು ರುಮಾಲನ್ನು ಮೇಜಿನ ಮೇಲೆ ಇಡುವುದರೊಳಗೆ, ಟಕ ಟಕ ಅಂತ ಗಣಕ ಯಂತ್ರವನ್ನು ಕುಟ್ಟಿ, ಉತ್ತರ ಹೇಳೇಬಿಡುತ್ತಿದ್ದರು. ರುಮಾಲನ್ನು ಮೇಜಿನ ಮೇಲೆ ಇಡುವುದಕ್ಕೆ ಅವಕಾಶ ಇಲ್ಲದೇ ಇರೋವಾಗ, ಇನ್ನು ತಲೆ ಆನಿಸಿ ನಿದ್ದೆ ತೆಗೆಯಲು ಸಾಧ್ಯವೇ? ಇಂಥಾ ಶಾಲೆಗಳಲ್ಲಿ ಮೇಷ್ಟರು ಯಾಕಿರಬೇಕು, ಮುಂಡಾ ಮೋಚಿಕೊಳ್ಳೋಕೆ?

ಇದೇ ಯೋಚನೆಯಲ್ಲಿ ಕತ್ತು ತಗ್ಗಿಸಿ, ಮೆಜೆಸ್ಟಿಕ್‌ನ ಬಿ.ಟಿ.ಎಸ್ ಸ್ಟ್ಯಾಂಡಿನಲ್ಲಿ ನಿಂತಿದ್ದ ನನ್ನ ಹೆಗಲ ಮೇಲೆ ಬಲವಾದ ಕೈಯೊಂದು ಬಿದ್ದಾಗ ನಾನು ಬೆವತು ಹೋದೆ. "ಯಾವ ಟೆರರಿಸ್ಟೋ, ಏನ್ಕಥೆಯೋ" ಎಂದು ಕತ್ತೆತ್ತದೆ, ಯೋಚಿಸಿದೆ. ಹಿಟ್ ಲಿಸ್ಟ್‌ನಲ್ಲಿ ನನ್ನ ಹೆಸರು ಬರುವ ಸಾಧ್ಯಾಸಾಧ್ಯತೆಯನ್ನು ಕುರಿತು ಚಿಂತಿಸಿದೆ.

"ಯಾಕೋ, ದ್ರಾಬೆ ಮುಂಡೇದೆ, ಗೊತ್ತಾಗಲಿಲ್ಲವಾ, ನಾನು ಹುಚ್ಚು, ನಿನ್ನ ಸ್ನೇಹಿತ. ಹ್ಹ ಹ್ಹ ಹ್ಹಾ...." ಎಂಬ ಧ್ವನಿಯೊಂದಿಗೆ, ಕರ್ಕಶವಾದ ಹುಚ್ಚು ನಗೆ, ನನ್ನ ಕರ್ಣೇಂದ್ರಿಯವನ್ನು ಅಪ್ಪಳಿಸಿತು. ಮೆಲ್ಲಗೆ ಆತನ ಮುಸುಡಿಯೆಡೆಗೆ ಓರೆ ನೋಟ ಬೀರಿದೆ. ಆ ದೊಣ್ಣೆ ಮೆಣಸಿನಕಾಯಿಯ ದಪ್ಪ ಮೂಗು ಕಣ್ಣಿಗೆ ಬಿದ್ದಿದ್ದೇ ತಡ,

ನನಗೆ ವ್ಯಕ್ತಿ ಯಾರೆಂಬುದು ತಿಳಿದೇ ಹೋಯಿತು. ಅವ ನನ್ನ ಬಾಲ್ಯ ಸ್ನೇಹಿತ ಹುಚ್ಚೇಗೌಡ. ಅವನನ್ನು ನೋಡಿಯೇ 14 ವರ್ಷಗಳ ಮೇಲಾಗಿತ್ತು. ಹನ್ನೆರಡು ವರ್ಷದ ಮೇಲೆ ಭೇಟಿಯಾದರೆ, ಪೊಖ್ತಾ ನೋಡೂ ಹಾಂಗಿಲ್ಲ. ಎಣ್ಣೆಯಲ್ಲಿ ಪರಸ್ಪರ ಮುಖಗಳನ್ನು ನೋಡಿಕೊಂಡ ಮೇಲೆಯೇ ಪರಸ್ಪರರು ನೋಡಬಹುದು, ಎನ್ನುವುದು ಶಾಸ್ತ್ರ. ಸಂಪ್ರದಾಯಸ್ತನಾದ ನಾನು ಶಾಸ್ತ್ರವನ್ನು ಮೀರೆಯೋಕೆ ಆಗುತ್ಯೆ ? ಕುತ್ತಿಗೆಯನ್ನು ಇನ್ನೂ ತಗ್ಗಿಸಿ, ನೆಲವನ್ನು ನೋಡುತ್ತಾ ನಿಂತೆ.

"ಯಾಕೋ ಛಕರಾ, ಇನ್ನೂ ಗೊತ್ತಾಗಲಿಲ್ವ, ನಾನ್ಯಾರೂಂತ. ಕತ್ತೆತ್ತಿ ನೋಡೋ, ಅದ್ಯಾಕೆ ನೆಲ ನೋಡ್ತಾಯಿದ್ದಿ..." ಎಂದು ನನ್ನ ಬೆನ್ನಿನ ಮೇಲೆ ಮತ್ತೊಂದು ಗುದ್ದು ಹಾಕಿದ ಹುಚ್ಚಪ್ಪ. ಆ ಧಡಿಯನ ಏಟಿಗೆ ಶಾಲಾ ಮಾಸ್ತರನ, ಅದರಲ್ಲೂ ಪ್ರೈಮರಿ ಶಾಲಾ ಮಾಸ್ತರನ ಬೆನ್ನು ತಡೆಯುತ್ತದೆಯೇ ? ಕಣ್ಣು ಕತ್ತಲಿಟ್ಟು, ನೆಲ ಕಚ್ಚಿದೆ. ಅವನೇ ನನ್ನ ಕೋಟಿನ ಕಾಲರನ್ನೆತ್ತಿ ಹಿಡಿದು, ನನ್ನನ್ನ ನೆಟ್ಟಗೆ ನಿಲ್ಲಿಸಿದ. "ಅದ್ಯಾಕೋ ಕುತ್ತಿಗೆ ಏನು ಮಾಡ್ಕೊಂಡೆ. ತಲೆ ಎತ್ತಿ ನೋಡೋ, ಕತ್ತೆ ಮಗನೆ" ಎಂದು ಪೀಡಿಸಿದ. ಎಲ್ಲಿ ನನ್ನ ಗೋಣಿನ ತಂಟೆಗೆ ಬರ್ತಾನೋ ಈ ಬಡವಾ ಅಂತ ಹೆದರಿ, ನಾನು ಬಸ್ ಸ್ಟ್ಯಾಂಡಿನಿಂದ ಮೆಲ್ಲನೆ ಕಂಬಿ ಕಿತ್ತೆ. ಅವನು ಬಿಟ್ಟಾನೆಯೇ ? ಅಟ್ಟಿಸಿಕೊಂಡು ನನ್ನ ಹಿಂದೆಯೇ ಓಡಿ ಬಂದ.

"ಬಾರೋ ಹುಚ್ಚು. ಮೊದಲು ಒಂದು ಹೋಟೆಲಿಗೆ ಹೋಗೋಣ. ಆಮೇಲೆ, ಎಲ್ಲಾ ಹೇಳ್ತೀನಿ" ಎಂದು ಪುಸಲಾಯಿಸಿ, ಅವನನ್ನು ಹತ್ತಿರದಲ್ಲೇ ಇದ್ದ ಹೋಟೆಲೊಂದಕ್ಕೆ ಕರೆದೊಯ್ದೆ. ಮಾಣಿ ತಂದಿಟ್ಟ ನೀರಿನ ಲೋಟಾದಲ್ಲಿ ಹುಚ್ಚಪ್ಪನ ಪ್ರತಿಬಿಂಬವನ್ನು ನೋಡಿದ ಮೇಲೆಯೇ ನಾನು, ಅವನನ್ನು ಮುಖಾ ಮುಖಿ ನೋಡಿದ್ದು. ಹುಲುಸಾಗಿ ಗಡ್ಡ, ಮೀಸೆಗಳನ್ನು ಬಿಟ್ಟು, ಒಳ್ಳೆ ಕೊರಡಿ ನಂತೆ, ಮಜಬೂತಾಗಿ ಬೆಳೆದಿದ್ದ ಹುಚ್ಚು.

"ಅದ್ಯಾಕೊ ಕತ್ತು ಬಗ್ಗಿಸಿಕೊಂಡು ಓಡಾಡ್ತಿದ್ದೀಯಾ ? ಏನಾದ್ರು ಲಕ್ವ ಗಿಕ್ವ ಬಡಿದಿದ್ಯೋ, ಹೆಂಗೆ?" ಎಂದ ಹುಚ್ಚಪ್ಪ.

"ಬಿಡ್ತು ಅನ್ನೋ ಮಹರಾಯ. ಅದೆಲ್ಲಾ ಒಂದೂ ಇಲ್ಲ. ನಾನು 12 ವರ್ಷದ ಮೇಲೆ ಭೇಟಿ ಆಗ್ತಿರೋದು ಅಲ್ವ ? ಅಂಥೋರು ಮುಖಾಮುಖಿ ನೋಡ್ಬಾರ್ದು. ಅದಕ್ಕೆ ನಿನ್ನನ್ನು ನೀರಿನ ಲೋಟಾದಲ್ಲಿ ನೋಡಿದ ಮೇಲೆ, ತಲೆ ಎತ್ತಿದ್ದು" ಎಂದು ವಿವರಿಸಿದಾಗ, ಹುಚ್ಚುವಿನ ಹುಚ್ಚು ನಗೆ, ಆ ಹೋಟೆಲನ್ನೇ ಅಲುಗಾಡಿಸಿತು. ಎಲ್ಲರೂ ನಮ್ಮ ಕಡೆಗೇ ನೋಡುತ್ತಿದ್ದುದನ್ನ ನೋಡಿ, ಬೇಗ ಕಾಫಿ ಕುಡಿದು, ಬಿಲ್ ಪಾವತಿ ಮಾಡಿ, ಹುಚ್ಚನನ್ನು ಎಳೆದುಕೊಂಡು, ಹೊರ ಬಂದೆ.

"ಈಗ ಹೇಳು. ನೀನು ಹ್ಯಾಂಗಿದ್ದೀಯಾ ? ಎಲ್ಲಿದ್ದೀಯಾ ? ಏನು ಮಾಡ್ಕೊಂಡಿದ್ದೀಯಾ ?" ನಾನು ಅವನ ಬಗ್ಗೆ ವಿಚಾರಿಸಿದೆ. "ನಾನು ಹರಿಶ್ಚಂದ್ರ ಘಾಟ್‌ಹತ್ರಾನೆ ಮನೆ ಮಾಡಿದೀನಿ. ಯಾಕಪಾ ಅಂತಂದ್ರೆ, ಮನೇಲಿರೋರೆಲ್ಲಾ ಮುದಿ ಗೊಡ್ಡುಗಳು, ನನ್ನನ್ನ ಬಿಟ್ಟು. ಆದ್ರಿಂದ, ಯಾವ ವೇಳೆಗೆ ಗೊಟಕ್ ಅನ್ನೊತ್ರೋ ಹೇಳೋಕೆ ಬರೋಲ್ಲ ನೋಡು. ಸುಡುಗಾಡಿಗೆ, ಖರ್ಚಿಲ್ಲದೆ ಸಾಗಿಸ ಬಹುದೂಂತ, ಘಾಟ್‌ನ ಹತ್ರಾನೆ ಮನೆ ಮಾಡಿದೀನಿ" ಎಂದ ಹುಚ್ಚು. ಅವನ ದೂರಾಲೋಚನೆಗೆ ತಲೆದೂಗಿದೆ.

"ಇನ್ನು ಹೇಗಿದ್ದೀಂತ ಕೇಳ್ದೆ. ನನ್ನ ನೋಡಿದರ ನಿನಗೆ ಗೊತ್ತಾಗುತ್ತೆ, ನಾನು ಹೇಗಿದ್ದೀನೀಂತ. ಏನ್ಮಾಡ್ತಿದ್ದೀ ಅಂದ್ಯಲ್ಲಾ, ಏನೂ ಮಾಡ್ತಾ ಇಲ್ಲ. ತಿನ್ನೋದು; ತಿರುಗೋದು. ಇಷ್ಟೆ"

"ಅಲ್ಲೋ, ನೌಕರಿ, ಚಾಕರಿ...?"

"ಅದೆಲ್ಲಾ ನನಗ್ಯಾಕೋ ಗುಗ್ಗು ? ಅನ್‌ಎಂಪ್ಲಾಯ್ಡ್ ಆದ್ದರಿಂದ ಸರ್ಕಾರ ದೋರು ಎಂಪ್ಲಾಯ್‌ಮೆಂಟ್ ಅಲೋಯನ್ಸ್ ಕೊಡ್ತಾ ಇದ್ದಾರೆ. ಸ್ವಾತಂತ್ರ್ಯ ಚಳವಳಿಯಲ್ಲಿ ಎರಡು ದಿನ ಜೈಲಿನಲ್ಲಿದ್ದೆನಲ್ಲ. ಆದ್ರಿಂದ, ಫ್ರೀಡಂ ಫೈಟರ್ಸ್ ಪಿಂಚ ಣೀನೂ ಬರ್‍ತಿದೆ. ಇನ್ನು ನಮ್ಮಜ್ಜಿಗೆ ಓಲ್ಡೇಜ್ ಪಿಂಚಣಿ, ನಮ್ಮಪ್ಪನಿಗೆ, ಫ್ಯಾಮಿಲಿ ಪಿಂಚಣಿ. ಹೀಗೆ ತಿಂಗಳು, ತಿಂಗಳು ಬರೋದ್ರಿಂದ ಮಜವಾಗಿದ್ದೀನಿ..." ಎಂದು, ಮತ್ತೆ ಗುದ್ದಲು ಕೈ ಎತ್ತಿದಾಗ, ನಾನು ದೂರಕ್ಕೆ ಹಾರಿದೆ.

"ಸರಿ, ಎಲ್ಲಿ ನಿನ್ನ ಮನೆ ?" ಎಂದು ಕೇಳಿದ.

"ರಾಜಾಜಿನಗರ" ಎಂದೆ.

"ಎಲಾ, ಇವನ, ಸಂದೂ ಆ ಕಡೇನೆ. ನಡೀ ಬಸ್‌ಗೆ ಹೋಗೋಣ," ಎಂದು ಅವಸರಪಡಿಸಿದ. "ಹೂಂ, ಹತ್ತು ಬೇಗ, ಹಿಂದಿನ ಸೀಟು ಖಾಲಿ ಇದೆ" ಎಂದು ನಾನು ಓಡುತ್ತಾ ಬಸ್ ಹತ್ತಿದೆ. ಹುಚ್ಚಪ್ಪ ನನ್ನ ಕೋಟು ಹಿಡಿದು ನನ್ನನ್ನು ಕೆಳಗೆಳೆದ.

"ಯಾಕೋ, ಏನು ನಿಂದು ಹುಚ್ಚಾಟ ? ಯಾರಾದ್ರೂ ಬ್ಯಾರೇಯೋವ್ರು ಕೂತ್ಕೊಂಡು ಬಿಟ್ಟಾರು. ಬೇಗ ಹತ್ತು" ಎಂದು ಆತುರಪಡಿಸಿದೆ.

"ಲೋ, ಬಿ.ಟಿ.ಎಸ್.ನಲ್ಲಿ ಕಡೇ ಸೀಟ್ ಮೇಲೆ ಕೂತ್ಕೋ ಬ್ಯಾಡ, ಅಪಾಯ...." ಅಂದ. "ಯಾಕೋ ಯಾರಾದ್ರೂ ಬಾಂಬು, ಗೀಂಬು ಇಟ್ಟ

ವ್ವಾರೇನೂ ?" ಎಂದು ಕೇಳಿದ. ಅವನೇ ಏನಾದ್ರೂ ಇಟ್ಟಿದ್ದಾನೋ ಎಂಬ ಗುಮಾನಿಯೂ ಆಯಿತು.

"ನಿನ್ನ ತಲೆ. ಬಾಂಬೂ ಇಲ್ಲ, ಬೊಂಬೂ ಇಲ್ಲ. ನೀನು ಬಸ್ಸಿಂದ ಇಳೀ ಮೊದ್ಲು. ಆಮೇಲೆ ಹೇಳ್ತೀನಿ" ಅಂದ. ಅನ್ಯಾಯವಾಗಿ ಖಾಲಿ ಇದ್ದ ಸೀಟು ಕೈತಪ್ಪಿ ಹೋಯಿತಲ್ಲಾ ಎಂದು ಅವನನ್ನು ಶಪಿಸುತ್ತಾ ನಾನು ಕೆಳಗಿಳಿದೆ. "ಏನು ಬೊಗಳು. ಅದೇನು ವಿಚಾರ ?" ಎಂದು ಅವನನ್ನು ಕೇಳಿದೆ.

"ನೋಡೋ, ಮೊದ್ಲು ಬೆಂಗಳೂರಿಗೆ ಬಂದಾಗ ಬಿ.ಟಿ.ಎಸ್.ನಲ್ಲಿ ಕಡೇ ಸೀಟ್‌ನಲ್ಲಿ ಕೂತ್ಕೊಂಡೆ. ಪ್ರಯಾಣ ಮಾಡಿದೆ. ಆಗ ಈ ಫುಟ್‌ಬೋರ್ಡ್ ಮೇಲೆ ಹತ್ತಿಕೊಂಡು ಪ್ರಯಾಣ ಮಾಡೋ ಈ ಬಾವಲಿಗಳು, ಲಂಚ್ ಬಾಕ್ಸನ್ನ, ಸ್ಕೂಲ್ ಬ್ಯಾಗನ್ನ, ಕೊಡೆ, ಕೋಲುಗಳ್ನ, ಕೊನೆಗೆ ಬ್ರೀಫ್‌ಕೇಸ್, ಹೀಗೆ, ಎಲ್ಲಾ ಲಗ್ಗೇಜನ್ನೂ "ಸ್ವಲ್ಪ ನೋಡ್ಕೊಳ್ಳಿ ಸಾರಾ, ಅಂತ ಕೊನೇ ಸೀಟಿನಲ್ಲಿ ಕೂತ ನನಗೇ ರವಾನಿಸ್ತಾ ಇದ್ದರು. ನನ್ನ ಲಗ್ಗೇಜು ಇಲ್ಲದಿದ್ರೂ ಇವರ ಲಗ್ಗೇಜುಗಳನ್ನೆಲ್ಲಾ ತೊಡೆ ಮೇಲೆ ಇಟ್ಟುಕೊಂಡು ಪ್ರಯಾಣ ಸಾಗಿಸಿದೆ. ಆದರೆ, ಯಾರು ನನ್ನ ವಶಕ್ಕೆ ಅವರ ಪದಾರ್ಥ ಕೊಟ್ಟರೂಂತ ನನಗೇನು ಗೊತ್ತಾಗುತ್ತೆ ? ಯಾರೋ ಕೊಟ್ಟರು. ಯಾರೋ ಎತ್ತಿಕೊಂಡು ಹೋದರು. ಆದರೆ ತಕರಾರು ಬಂದಿದ್ದು ಆ ಬ್ರೀಫ್‌ಕೇಸ್‌ನವನಿಂದ. ಅವನ ಬ್ರೀಫ್‌ಕೇಸನ್ನ ಮತ್ಯಾರೋ ಕೊಂಡು ಹೋಗಿದ್ದರು"

ಆ ಬ್ರೀಫ್‌ಕೇಸ್‌ನವನದು, ಒಂದೇ ಗಲಾಟೆ. ಪೊಲೀಸು ಸ್ಟೇಷನ್ನಿಗೂ ಹೋಗಿದ್ದಾಯ್ತು. ಆದ್ರೆ ಆ ಬ್ರೀಫ್‌ಕೇಸ್‌ನಲ್ಲಿ ಬರೀ ಕೆಲಸಕ್ಕೆ ಅರ್ಜಿ ಗುಜರಾಯಿಸಿದ ನಕಲುಗಳು ಇದ್ದುದರಿಂದ ಸಬ್ ಇನ್ಸ್‌ಪೆಕ್ಟರ್ ವಾರ್ನ್ ಮಾಡಿ ನನ್ನನ್ನು ಬಿಟ್ಟ. ಅವತ್ತಿಂದ ನಾನು ಬಿ.ಟಿ.ಎಸ್.ನ ಕಡೇ ಸೀಟಿನಲ್ಲಿ ಕೂತಿದ್ದೇ ಇಲ್ಲ.

ಹುಚ್ಚುವಿನ ಈ ಅನುಭವವನ್ನು ಕೇಳಿದ ಮೇಲೆ, ಮೊದಲೇ ಭಯಸ್ಥನಾದ, ನಾನು ಬಸ್ಸಿನಿಂದ ತಕ್ಷಣ ಕೆಳಕ್ಕಿಳಿದೆ. ತುಂಬು ಗರ್ಭಿಣಿಯಂತೆ, ಬಸ್ಸು ಕಮ್ಯೂಟರ್‌ಗಳಿಂದ ತುಂಬಿದ ಮೇಲೆ, "ಹೂಂ, ಹತ್ಕೋ ಈಗ" ಎಂದ ಹುಚ್ಚಪ್ಪ. "ಎಲ್ಲಯ್ಯಾ ಹತ್ಕೋಳ್ಳೋದು ? ಕಾಲಿಡೋಕೆ ಕೂಡ ಜಾಗ ಇಲ್ಲ. ಮುಂದಿನ ಬಸ್ಸಿಗೆ ಹೋಗೋಣ" ಎಂದೆ.

"ಸುಮ್ನೆ ಹತ್ತೋ, ತೇಕಡೀಕೆ... ಎಂದು, ನನ್ನನ್ನು ಆ ಫುಟ್‌ಬೋರ್ಡ್‌ನ ಮೇಲೆ, ಜನಗಳ ಮೇಲೆ ತಳ್ಳಿ, ಲಟ್ಟಣಿಗೆಯಿಂದ ಹಪ್ಪಳವನ್ನು ಒತ್ತುವ ಹಾಗೆ ನನ್ನನ್ನು ಒತ್ತಿದೆ. ನಾನೂ ಚೀರಿಕೊಂಡರೂ ಆ ಧಾಂಡಿಗ ಬಿಡಲೇ ಇಲ್ಲ. ತನ್ನ ಒಂದು

ಕಾಲನ್ನು ಫುಟ್‌ಬೋರ್ಡ್‌ನ ಮೇಲೆ ಇಟ್ಟುಕೊಂಡು, ಮತ್ತೊಂದು ಕಾಲನ್ನು ನೇತಾಡಿಸುತ್ತಾ, ಎರಡೂ ಕೈಗಳಿಂದ, ಆ ಕಡೆಯ ಮತ್ತು ಈ ಕಡೆಯ ಕಂಬಿಗಳನ್ನು ಹಿಡಿದುಕೊಂಡು, ನನ್ನನ್ನು ಬೀಳದ ಹಾಗೆ ಅಮುಕಿ ಹಿಡಿದಿದ್ದ. ಆ ಒತ್ತಡದಲ್ಲಿ ನನ್ನ ದೇಹವೇ ಲಟ್ಟಿಸಿದ ಚಪಾತಿಯಂತೆ ಆದಾಗ, ಇನ್ನು ನನ್ನ ರುಮಾಲು ಉಳಿಯುತ್ತದೆಯೇ? ಅದು ಸುರುಳಿ ಮುರಿದುಕೊಂಡು ಶಲ್ಯದಂತೆ ನನ್ನ ಹೆಗಲ ಮೇಲೆ ಬಿದ್ದುಕೊಂಡಿತು. ಅದಕ್ಕೆ ಚುಚ್ಚಿದ್ದ ಗುಂಡುಸೂಜಿಗಳು, ದಿಕ್ಕಾಪಾಲಾಗಿ, ಅವರಿವರಿಗೆ ಚುಚ್ಚಿಕೊಂಡವು. ಸೆಂಟ್ರಲ್‌ನ ಹಿಂದಿನ ಚೆಕ್‌ಪಾಯಿಂಟ್‌ನಲ್ಲಿ ಬಸ್ಸು ನಿಂತಾಗ, "ಇಳಿಯೋ ಗಾವಡಾಡ್, ಕಂಡಕ್ಟರ್ ಟಿಕೀಟ್ ಕೊಡೋಕೆ ಬರ್‍ತಾನೆ" ಎಂದ. "ನಾನೇ ಕೊಡ್ತೀನಿ ಬಿಡಯ್ಯಾ" ಎಂದು ಹೇಳಿ ಆದಷ್ಟು ಒಳ ನುಗ್ಗಲು ಪ್ರಯತ್ನಿಸಿದೆ. ಆದರೆ ಆ ಪಾಪಿ ಬಿಡ್ತಾನೆಯೇ? ನನ್ನ ಕತ್ತಿನ ಪಟ್ಟಿ ಹಿಡಿದು, ಕೆಳಕ್ಕೆಳೆದವನೇ, ನನ್ನನ್ನು ದರದರ ಎಳೆದುಕೊಂಡು, ಮುಂದಿನ ಸ್ಟಾಪಿಗೆ ಬಂದ. ಅಲ್ಲಿಗೆ ತುಂಬಿದ ಇನ್ನೊಂದು ಬಸ್ಸು ಬಂದಾಗ ಅದರೊಳಗೆ ಮತ್ತೆ ನನ್ನನ್ನು ನೂಕಿ, ನನ್ನನ್ನು ಆತು ನಿಂತುಕೊಂಡ. ನಾನು ಉಸಿರು ಕಟ್ಟಿಕೊಂಡು ಒದ್ದಾಡಿದೆ. ಯಾರ ಮೂತಿ ನೋಡಿ, ಬೆಳಗ್ಗೆ ಎದ್ದನೋ ಎಂದು ಹಲುಬಿದೆ. ಆ ಹುಚ್ಚ, ಮತ್ತೆ ಮಲ್ಲೇಶ್ವರದಲ್ಲಿ ಬಸ್ಸು ನಿಂತಾಗ, ಹಿಂದಿನ ಹಾಗೆ ನನ್ನನ್ನು ಬಸ್ಸಿನಿಂದ ಕೆಳಗೆಳೆದು ಹಾಕಿದ.

"ಇಲ್ಯಾಕೋ ಇಳಿತೀಯಾ? ನಿನ್ನ ಸ್ಟಾಪ್ ಹರಿಶ್ಚಂದ್ರಘಾಟ್ ಅಲ್ಲವೇನೋ?" ಎಂದು ಮೂಢನಂತೆ ಕೇಳಿದೆ. ಅವನು ದೂಸರ ಮಾತನಾಡದೆ ಮತ್ತೊಂದು ಭರ್ತಿ ಬಸ್ಸಿಗಾಗಿ ಕಾದ. ಮಲ್ಲೇಶ್ವರದಿಂದ ಶ್ರೀರಾಮಪುರದವರೆಗೂ ಇದೇ ಪುನರಾವೃತ್ತಿ. ತ್ರಿಶಂಕುವನ್ನು ಬೀಳದಂತೆ ತಡೆದು ಹಿಡಿದ ವಿಶ್ವಾಮಿತ್ರನಂತೆ. ಹುಚ್ಚು ನನ್ನನ್ನು ಹಿಡಿದುಕೊಂಡು, ಶ್ರೀರಾಮಪುರದ ಚೆಕ್ ಪಾಯಿಂಟ್‌ನಲ್ಲಿ ಬಸ್ಸು ನಿಂತಾಗ ನನ್ನನು ಕೆಳಗಿಳಿಸಿ, ದರದರ ಎಳೆದುಕೊಂಡು, ಘಾಟ್‌ನ ಕಡೆಗೆ ಹೆಜ್ಜೆ ಹಾಕಿದ.

ಬೆಂಗಳೂರು ಬಸ್ ಸ್ಟ್ಯಾಂಡ್‌ನಿಂದ. ಶ್ರೀರಾಮಪುರದವರೆಗೆ ಬರೋಕೆ ಮೂರು ಬಸ್ಸು ಬದಲಾಯಿಸಿದನಲ್ಲ. ಇವನಿಗೇನು ತಲೆ ಕೆಟ್ಟಿದೆಯೆ? ನಾನು ಅವನನ್ನು ನೋಡಿ, 12 ವರ್ಷದ ಮೇಲಾಗಿದ್ದುದರಿಂದ, ಇತ್ತೀಚೆಗೇನಾದರೂ ಅವನಿಗೆ ಹುಚ್ಚು ಹಿಡಿದಿತ್ತೇ ಅನ್ನೋ ಗುಮಾನಿಯಾಯಿತು ನನಗೆ.

"ನೋಡಿದ್ಯೇನೋ, ಮೂರು ಕಾಸು ಖರ್ಚಿಲ್ಲದೆ, ಬಿ.ಟಿ.ಎಸ್.ನಲ್ಲಿ 12 ವರ್ಷದಿಂದ, ಹೀಗೆ ಓಡಾಡಿಕೊಂಡಿದೇನೆ. ಅದಕ್ಕೆ ರಶ್ ಇರೋ ಬಸ್ಸಿನಲ್ಲೇ ನಾನು ಹತ್ತೋದು. ಫುಟ್‌ಬೋರ್ಡ್‌ನ ಮೇಲೆ ನಿಂತಿರೋದು. ಕಂಡಕ್ಟರ್ ಆ ಕಡೆಯಿಂದ ಟಿಕೀಟು ಕೊಟ್ಟುಕೊಂಡು, ಫುಡ್‌ಬೋರ್ಡ್‌ನ ಹತ್ತಿರ ಬರೋ ವೇಳೆಗೆ ಚೆಕ್

ಫೋಸ್ಟೋ, ಸ್ವಾಪೋ ಬಂದಿರುತ್ತೆ, ಚಕ್ಕಂತ ಇಳ್ಕೊಂಡು, ಮುಂದಿನ ಬಸ್ಸು ಹಿಡಿಯೋದು. ಚೆಕಿಂಗ್ ಬಂದ್ರೂ ಹಿಡಿಯೋ ಹಾಗಿಲ್ಲ. ಯಾಕಂದ್ರೆ ಇನ್ನೂ ಸ್ಟೇಜ್ ಮುಗಿದಿರೋಲ್ಲ ನೋಡು.... ಅಂದ ಹುಚ್ಚ.

"ಭಲೇ" ಮನಸ್ಸಿನಲ್ಲೇ ಮೆಚ್ಚಿದೆ ಅವನ ಮೇಧಾವಿತನಕ್ಕೆ. ಪುಕ್ಕಟೆ ಬಸ್ ಪ್ರಯಾಣ, ಕೆಲಸವೇ ಇಲ್ಲದೆ ತಿಂಗಳು ತಿಂಗಳೂ ಪಗಾರ, ಬೇರೆ ಉದ್ಯೋಗ ಇಲ್ಲದೆ, ಎರಡು ದಿನ ಜೈಲಿನಲ್ಲಿ ಬಿದ್ಕೊಂಡಿದ್ದಕ್ಕೆ ಫ್ರೀಡಂ ಫೈಟರ್ ಪಿಂಚಣಿ. ಎಂತಹ ಸುಖವಾದ ಐಶಾರಾಮದ ಬದುಕುವ ಮಾರ್ಗ ಹಿಡಿದಿರುವ ಅವನು ಹುಚ್ಚನೆ? ಅಥವಾ ಮೂಗಿಗೆ ಕವಡೆ ಕಟ್ಟಿಕೊಂಡು ತಿಂಗಳ ಪಗಾರಕ್ಕಾಗಿ ಕತ್ತೆಯಂತೆ ದುಡಿಯುತ್ತಾ, ವರ್ಷೇ ವರ್ಷೇ ವಿಷದಂತೆ ಏರುತ್ತಿರುವ ಬಸ್ಸಿನ ದರವನ್ನು ತೆತ್ತು ಪ್ರಯಾಣ ಮಾಡುತ್ತಿರುವ ನಾನು ಹುಚ್ಚನೆ? ಯಾರು ಹುಚ್ಚರು...?"

ವಿಷಯವನ್ನು ಮಂಥನ ಮಾಡುತ್ತಾ, ಗೋಣು ತಗ್ಗಿಸಿ, ರಾಜಾಜಿನಗರದ ಕಡೆಗೆ ಹೆಜ್ಜೆ ಹಾಕಿದೆ. ಹುಚ್ಚಪ್ಪನೆಂಬ ನಾಮಕರಣ ಯಾರಿಗೆ ಹೆಚ್ಚು ಸೂಟ್ ಆಗಬಲ್ಲದು ಎಂಬುದನ್ನು ಚಿಂತಿಸುತ್ತಾ ಕಾಲು ಹಾಕಿದೆ.

25

# ಪರಿಮಿತಿಗಳು

**ಆ. ರಾ. ಸೇ.**

---

ಪ್ರಿಯ ಪುತ್ರರಾದ ವೀರಣ್ಣನವರೇ, ವಿನಯ ಪೂರ್ವಕ ವಿಜ್ಞಾಪನೆಗಳು, ಶರಣು ಶರಣಾರ್ತಿಗಳು.

ಲೇ, ದುಬ್ಬೀರ್‍ಗಾ, ನಿನ್ನೆ ನೀನು ಸಿನ್‌ಸಿನ್ನಾಟಿ ಸರ್ಕಲಿನಲ್ಲಿ ಕಂಡೊಡನೆ, ಪಿತ್ತ ನೆತ್ತಿಗೇರಿತು. ತೆಗೆದು ಎರಡು ಕೊಡೋಣವೆಂದುಕೊಂಡೆ. ಆದರೆ ನನ್ನ ಅಮಿತ್ರ ರನ್ನು ವಿಚಾರಿಸಿಕೊಳ್ಳಲು (ಅಂಥ ಪ್ರಸಂಗವೇ ಇಲ್ಲ, ಏಕೆಂದರೆ ನನಗೆ ಶತ್ರುಗಳೇ ಇಲ್ಲ) ಇರುವವನು ನೀನೊಬ್ಬನೇ ಎಂದು ನೆನಪಾಗಿ ಸುಮ್ಮನಾದೆ. ನೀನು ನಮೋ ನಮೋ ಎಂದೆ. ದೋಸೆ ಕೊಡಿಸಿದೆ, ಚಹಾ ಹೊಡೆಸಿದೆ. ಸದ್ಯದಲ್ಲೇ ನಮ್ಮ ಮನೆಗೆ ಬರುವುದಾಗಿ ಹೇಳಿದೆ. ನಾನು ಬೆದರಿ ಸುಮ್ಮನಾದೆ.

ನಿನಗೆ ಮೆದುಳು ಇರುವುದಾದರೆ ಅದಕ್ಕೆ ಏನಾಗಿದೆ? ತೆಪ್ಪಗಿರುವುದಕ್ಕೆ ನಿನಗೇನು ಕೊಡಬೇಕು? ಸತಾಯಿಸಲು ನಿನಗೆ ಸಿಕ್ಕುವವನು ನಾನೊಬ್ಬನೇ ಏನು?

ಅಯ್ಯಾ ನನ್ನ ಪಾಡಿಗೆ ನಾನು ಹಾಯಾಗಿದ್ದೇನೆ ಬೇಕೆನ್ನಿಸಿದರೆ ನನಗೆ ಹತ್ತಲ್ಲ ಇಪ್ಪತ್ತು ಲೀಟರ್ ಸೀಮೆ ಎಣ್ಣೆ ಕೊಡಿಸು. ಐದಲ್ಲ ಹತ್ತು ಕೆ. ಜಿ. ಸಕ್ಕರೆ ಕೊಡಿಸು ಆದರೆ ನಿನಗೆ ಗೊತ್ತಿಲ್ಲದ ವಿಷಯಗಳಲ್ಲಿ ಅಥಾರಿಟಿಯಂತೆ ಉಪದೇಶ ಕೊಡಲು ಬಗಬೇಡ. ಸ್ವಲ್ಪ ಉಂಡು ಉರಿ. ಉಪವಾಸ ಉರಿಯಬೇಡ. ಮಿತ್ರರು ಕಾಫಿ ಕೊಡಿಸಬೇಕು. ಮುನ್ನುಡಿ ಬರೆಯಬಾರದು.

ಸ್ವಲ್ಪ ನೆನೆಸಿಕೋ: ಮುಗಿಲುಹಳ್ಳಿ ಅಥೇನಿಯಂ ಅಧ್ಯಕ್ಷನಾದ ಹೊಸದರಲ್ಲಿ, ಎಂಬತ್ತರ ದಶಕದ ಆರಂಭದಲ್ಲಿ, ನೀನು ನನ್ನಿಂದ ಒಂದು ಕವನ ಸಂಕಲನವನ್ನು ಪಡೆದು ಪ್ರಕಸಿಟಿದೆ. ಥ್ಯಾಂಕ್ಸ್. ಅದಕ್ಕೆ ನಿನ್ನ ಒಂದು ಘನವಾದ ಮುನ್ನುಡಿ ಇತ್ತು. ಅದನ್ನೇಕೆ ಬರೆದೆ ಎಂದು ಕೇಳಿದ್ದಕ್ಕೆ 'ನೀನ್ಯಾವನಲೇ ಕೇಳಕ್ಕೆ?' ಎಂದೆ. 'ನಾನು ಪುಸ್ತಕ ಬರೆದವನು' ಎಂದೆ. ಅದಕ್ಕೆ ನಾನು ಮುನ್ನುಡಿ ಬರೆದವನು' ಎಂದೆ ನೀನು. ನಾನು ಕೇಳದೆ, ನನಗೆ ಹೇಳದೆ ಬರೆಯಲು ಏಕೆ ಹೋದೆ? ಬಕ್ಕಪ್ಪನಾಣೆ ಮಾಡಿ ಹೇಳು, ನೀನೇ ಅದನ್ನು ಬರೆದೆಯಾ?

ಬರೆದುಕೋ. ಕೈಯಲ್ಲಿ ಪೆನ್ನಿದೆ, ಬಿಳಿ ಹಾಳೆ ಬಿಟ್ಟಿ ಸಿಕ್ಕಿದೆ. ಆದರೆ ನನ್ನ ಪದ್ಯ ಜಾಳು ಜಾಳು ಎಂದೆಯಲ್ಲಾ, ಎಲೋ ಮಕರೇ. ನೀನು ಅಥೇನಿಯಂನೊಡನೆ ಇತಿಹಾಸವಾದರೂ ಆ ಪದ್ಯ ಉಳಿಯುತ್ತದೆ. ಬೆಳಗುತ್ತದೆ. ಅಲ್ಲದೆ ನಿನ್ನಂಥವರು ನಾಮನಾಸ್ತಿಯಾದರೂ, ದಿನೇ ದಿನೇ ಸಂಖ್ಯೆಯಲ್ಲಿ ಬೆಳೆಯುತ್ತಿದ್ದರೂ, ಅದು ಇದ್ದೇ ಇರುತ್ತದ. ನೀನು ಅದನ್ನು ಹೊಗಳಿದರೂ, ತೆಗಳಿದರೂ ಯಾವ ಪರಿಣಾಮವೂ ಆಗುವುದಿಲ್ಲ. ನೀನು ಕೆಲವೇ ತಿಂಗಳುಗಳ ಹಿಂದೆ ಹೋಟೆಲ್ ಹಾಪ್ ಪಾಪ್‌ನಲ್ಲಿ ಕೇಳಿದ ಒಂದು ಪ್ರಶ್ನೆಯನ್ನು ಹೊರಗೆಡಹಲು ಇದೇ ಸಮಯ.

ನೀನು ಕೇಳಿದೆ "ಪದ್ಯ ಅಂದ್ರೇನಲೇ ರಾಯಾ ? ಅದನ್ನ ಯಾಕೆ ಬರೀಥರಲೇ ? "

ಸಹೃದಯರು ಇದ್ದಾರೆ. ಇದ್ದೇ ಇರುತ್ತಾರೆ.

ಆಗಿ ಹೋದ ಸಮಾಚಾರ. ಹಿಂದಿನದನ್ನು ನೆನೆಸಿಕೊಂಡು ಹಿತ್ತಲಲ್ಲಿ ಅತ್ತರಂತೆ.

ಎಡವಿದ ಕಾಲೇ ಎಡವುತ್ತದಂತೆ. ಗಾಯವಾದ ಬೆರಳೇ ಮತ್ತೆ ತರಚಿ ರಕ್ತ ಬರುತ್ತದಂತೆ.

ನೀನು–ನಾನು ಹಕ್ಕ ಬುಕ್ಕರಂತೆ ಹಲವು ಹತ್ತೆಂಟು ವರ್ಷಗಳಿಂದ ಜೊತೆಯಾಗಿಯೇ ಇದ್ದೇವೆ. ನೀನು ನನಗೆ ಹತ್ತಾರು ಬಾರಿ ಕೈಕೊಟ್ಟಿದ್ದೀಯ. ಆದರೂ ನಮ್ಮ ವಿಶ್ವಾಸ ಹಾಗೇ ಇದೆ. ಒಂದು ಇಸಮು ಏನಾದರೂ ಅದೇ ಇಸಮು ತಾನೇ ?

ಮತ್ತೆ ಅದೇ ಕತೆ. ಒಂದು ಪುಸ್ತಕ ಬರಯಲು ನೀನು ಕೇಳಿದೆ. ನಾನು ಬರೆದುಕೊಟ್ಟೆ. ನೀನದನ್ನು ಪ್ರಿಂಟ್ ಮಾಡಿದೆ. ರಾಯಲ್ಟಿ ಕೊಟ್ಟೆ, ನಾನು ಅದನ್ನೇ ಶಂಖವೋ ಖರ್ಜವೋ ಎಂದು ಭಾವಿಸಿ, ಸಂತೋಷಪಟ್ಟೆ; ತಿಂದು ತೇಗಿದೆ. ಬರಹಗಾರನಿಗೆ ಸಿಕ್ಕಷ್ಟೇ ಸಿದಬನ್ನ.

ಊರಿನಲ್ಲಿ ಎಲ್ಲರಿಗೂ "ಪುಸ್ತ್ಗ, ಪಸ್ಟೈತೆ. ರಾಯ ತಲೆಗಾರ" ಎಂದು ಹೇಳಿದೆ. ಅವರೆಲ್ಲಾ ನನಗೆ ಹೇಳಿದರು. ನಾನು ಉಬ್ಬಿದೆ. ಕಾಪಿ ಕುಡಿಸಿದೆ, ಮೆಣಸಿನಕಾಯಿ ತಿನಿಸಿದೆ, ಬೀಡಿ ಸೇದಿಸಿದ. ಆಮೇಲ ಪುಸ್ತಕ ಬಂತು. ಮಜವೋ ಮಜ.

ಅಲ್ಲಲೇ ಈರ್ಗಾ ನನ್ನ ಪುಸ್ತಕ ಜಡ್ಜ್ ಮಾಡನು ನೀನೇ ? ಅಯ್ಯೋ ಕೆಪರ್ಗಾ, ಪುಸ್ತ್ಗ ಅಂದ್ರೆ ಸೀಮೆಗೊಬ್ರಾನೇ ? ಫ್ಯಾನ್ ಬೆಟ್ಟೇ ? ಹುಳುಕು

ಕೊತ್ತುಂಬ್ರಿ ಕಾಳೇ ? ನೀನು ಮುನ್ನುಡಿಯಲ್ಲಿ ಮಾಡಿದ ಆರೋಪಗಳ ನುಡಿ ಮುತ್ತುಗಳು ಹೀಗಿವೆ :

ಉತ್ತರ ಕೊಡುತ್ತಿದ್ದೇನೆ.

೧. ರಾಯರು ಮುಗಿಲುಹಳ್ಳಿಯ ಸಾಹಿತ್ಯಾಕಾಶದಲ್ಲಿ ಕುಜಗ್ರಹದಂತೆ ಥಳ ಥಳಿಸುತ್ತಿದ್ದರು. ಇದ್ದಾರೆ.

ಉತ್ತರ : ಕುಜಗ್ರಹ ಥಳ ಥಳಿಸುವುದಿಲ್ಲ. ಕೆಂಪಗೆ ಮಂಕಾಗಿರುತ್ತದೆ. ನಿನ್ನಂತಹ ಗ್ರಹಗಳನ್ನು ನೋಡಿದರೆ ಮಂಕು ತಾನಾಗಿಯೇ ಆಡಸುತ್ತದೆ.

೨. ಅವರ ಧೋರಣೆ ಬದಲಾಗಿದೆ.

ಉತ್ತರ : ಬದಲಾಗಿರುವುದು ನಿನ್ನ ಬುದ್ಧಿ ಎನ್ನಲಾರೆ. ಹಾಗೆ ಹೇಳುವುದು ತಪ್ಪಾದೀತು.

೩. ಜೀವನವನ್ನು ನೋಡುವಲ್ಲಿ ಹಾಸ್ಯ ಪ್ರಜ್ಞೆ ಪ್ರಮುಖ. ಆಳವಾದ ಚಿಂತೆ ಅಗತ್ಯ.

ಉತ್ತರ : ಹಳ್ಳಿಯಿಂದ ದಿಳ್ಳಿಯವರೆಗೆ ಎಲ್ಲೆಲ್ಲೂ ಹಾಸ್ಯಾಸ್ಪದ ಘಟನೆಗಳೇ ಇವೆ. ಹಾಸ್ಯ ಪ್ರಜ್ಞೆ ಈಗ ರೌಂಡ್ ಎಬೌಟ್ ಟರ್ನ್ ತೆಗೆದುಕೊಳ್ಳಬೇಕಾಗಿದೆ. ಅಗತ್ಯವಾದುದು ಆಳವಾದ ಚಿಂತನೆ. ಚಿಂತೆಯಲ್ಲ.

೪. ತನ್ನ ಪರಿಮಿತಿಯಲ್ಲಿ ಪುಸ್ತಕ ಆರ್ದ್ರವಾಗಿ ನಮ್ಮನ್ನು ತಬ್ಬಿಕೊಳ್ಳುತ್ತದೆ.

ಉತ್ತರ: ನನ್ನ ಪುಸ್ತಕ, ಓದುಗರನ್ನು ತಬ್ಬಿಕೊಳ್ಳುವುದು ಅಸಹನೀಯ ಕಲ್ಪನೆ. ಅವರೇನು ಊರ್ವಶಿಯೇ ?

ಎಲ್ಲ ಪುಸ್ತಕಗಳಿಗೂ ಪರಿಮಿತಿ ಇದ್ದೇ ಇರುತ್ತದೆ. ಆದರೆ ನನ್ನ ಅಪ್ಪಣೆ ಇಲ್ಲದೆ ನೀನು ಏಕೆ ಮುನ್ನುಡಿ ಬರೆದೆ ? ಪ್ರಕಾಶಕ ಪುಸ್ತಕವನ್ನು ಪ್ರಕಾಶನ ಮಾಡ ಬೇಕು. ಇಲ್ಲವೇ ಕಸದ ಪುಟ್ಟಿಗೆಸೆಯಬೇಕು. ಮುನ್ನುಡಿ ಬರೆಯಲು ಇರುವ ಪರಿಮಿತಿಗಳ ಕಲ್ಪನೆ ನಿನಗಿದೆಯೇ !

ಎಂದು ಕೇಳುವ ನಿನ್ನ ಮಿತ್ರ,
ರಾಯ.

# ಕೆಂಬೂತ ಪುಕ್ಕ ತೆರೆದರೆ ನವಿಲೇ?

**ಕಮಲಾ ರಾಮಸ್ವಾಮಿ**

"ಆ Article ಓದಿದ್ಯಾ ?"

"ಇಲ್ಲಾರಿ. ಬಿಡುವೇ ಆಗ್ಲಿಲ್ಲ."

"ತುಂಬಾ Inefficient ಕಣೇ ನೀನು ! ಇಡೀ ದಿನ ಮನೇಲೇ ಕೂತಿರ್‍ತಿ. ಅದಕ್ಕೆ ಪುರಸೊತ್ತಿಲ್ಲ, ಇದಕ್ಕೆ ಟೈಮಿಲ್ಲ ಅಂತ ನೆಪ ಹೇಳ್ತಿ. ಸ್ಸ...ರಿ. ಬಿಡು" ಬಿರ್‍ರನೆ ಬಾತ್‌ರೂಮಿಗೆ ಹೋದ್ರು.

ನನ್ನ Blood pressure ಏರಿತು. ನಿಜವಾಗಿಯೂ ಮನೇಲಿರೋ Housewife ಕಾಲು ಕಸಕ್ಕಿಂತ ಕಡೆ. ಈ Thankless social workನಿಂದ ಯಾವ ಪುರುಷಾರ್ಥ ಸಾಧಿಸುತ್ತೀವೋ ? ಬೆಳಗ್ಗೆ 5–30 ಗಂಟೆಗೆ ಎದ್ದರೆ, ರಾತ್ರಿ 11–30 ಟಿ. ವಿ.ಯವರು Good night ಹೇಳುವ ತನಕ ಕೆಲ್ಸ ಸರಿಯಾಗಿರುತ್ತೆ. ಮಧ್ಯಾಹ್ನ ಒಂದು ಗಳಿಗೆ ಕಾಲು ಚಾಚಿ ಮಲಗಲು ಸಿಗಬಹುದು. ಅದೇ ಇವರಿಗೆಲ್ಲ ಕಣ್ಣುರಿ ! ಸಿಟ್ಟು ಬಂತು. ಬುಸುಗುಡುತ್ತಾ ಟೀ ಮಾಡಲು ಹೋದೆ. ಟೀ ಕುಡಿದು ಇವ್ರು ಸಂಜೆ ವಾಕಿಂಗ್ ಹೊರಟರು. ನಾನು ಆ ಲೇಖನ ತೆಗೆದು ಓದಿದೆ. ಬರೆದಿದ್ದ ಅಮೇರಿಕದ ಮಹಾಶಯನಿಗೆ ಗರತಿಯ ಕೆಲಸದ ಬವಣೆ ಚೆನ್ನಾಗಿ ಮನದಟ್ಟಾಗಿತ್ತು. ಅದೆಷ್ಟು ಚೆನ್ನಾಗಿ ಬರೆದಿದ್ದ ಅಂತ. "ನಾವು ದಿನಗೆಲಸ ಮಾಡುವಾಗ ಆಗುವ ಆತಂಕ, ಅವಾಂತರ. ಗಡಿಬಿಡಿ ಅನಾವಶ್ಯಕ. ಅದರಿಂದ ಸಿಟ್ಟು, ಕೋಪ ಬರುತ್ತೆ. ಇದೇ ನಮ್ಮ ದೈಹಿಕ ಕಾಹಿಲೆಗೆ ತಳಹದಿಯಾಗುತ್ತೆ. ರಕ್ತದ ಒತ್ತಡ, ಅರೆತಲೆನೋವು, ಸುಸ್ತು, ಸಂಕಟ ಎಲ್ಲಕ್ಕೂ ಇದೇ ಮೂಲ – ಇದನ್ನು ಸರಿಪಡಿಸಿಕೊಳ್ಳುವುದು ನಮ್ಮ ಕೈಲೇ ಇದೆ. ಶಾಂತವಾಗಿರಿ—ಸಮಾಧಾನ, ತಾಳ್ಮೆಯಿಂದ ಯೋಚಿಸಿ ಕೆಲಸ ಮಾಡಿ. ಫಲ ನಿಮಗೇ ಗೊತ್ತಾಗುತ್ತೆ" ಎಂದಿತ್ತು ಅದರ ತಿರುಳು.

ನಿಜ ! ಯೋಚಿಸಿದೆ. ನಾನು ಎಲ್ಲೂ ಕೆಲಸಕ್ಕೆ ಹೋಗುಲ್ಲ. ಮತ್ತ್ಯಾಕೆ ಹೀಗೆ ಗಡಿಬಿಡಿ, ಅವಾಂತರ. ಅವಸರಪಟ್ಟುಕೊಂಡು ರೇಸ್ ಕುದುರೆ ತರಹ ಒಂದೇ ಸಮ್ನೆ ಕೆಲ್ಸ ಮಾಡ್ಬೇಕು. ನಾಳೆಯಿಂದ ಖಂಡಿತ ನಾನು ಪೂರ್ತಿ ಬದಲಾಯಿಸಿ ಬಿಡುತ್ತೇನೆ. ನನ್ನ ಒಳ್ಳೇದಕ್ಕೇ ಅಲ್ಲವೆ ?

ಆ ಸಂಜೆಯಿಂದಲೇ ನಾಳೆ ಬದಲಾಗುವ ನನ್ನ ದಿನಚರಿ ಬಗ್ಗೆ ಕಾಳಜಿ, ಕಾತರ. ಬೆಳಗ್ಗೆ 5½ ಗಂಟೆಗೆ ಎದ್ದು ಅರ್ಧ ಗಂಟೆ ವಾಕ್ ಹೋಗಿ ಬಂದರೆ ಜೀವಕ್ಕೆ ಎಷ್ಟು ಹಿತ. ಆಮೇಲೆ ನಿಧಾನವಾಗಿ ಕೆಲ್ಸ ಮಾಡಿಕೊಂಡ್ರೆ ಆಯಿತು. ಮನೇಲೇ ಇರ‍್ತೀನಲ್ಲಾ! ಒಂದು Time table ಹಾಕಿಕೊಳ್ಳಬೇಕು. ನನ್ನ ಲೆಕ್ಕದ ಪುಸ್ತಕವಲ್ಲಿ ನನ್ನ ದಿನಚರಿ ಗೊತ್ತುಮಾಡಿದೆ. 5½ಗೆ ವಾಕ್. 6–6½ಗೆ ಸ್ನಾನ, ಇತ್ಯಾದಿ. 6½–8½. ತಿಂಡಿ, ಕಾಫಿ, ಅಡುಗೆ. 8.30–10 ಮನೆ Cleaning. 10–11 ಪೂಜೆ, ಫೋನ್, ಇತ್ಯಾದಿ. 11ರಿಂದ 1½ ಗಂಟೆಯ ತನಕ ನನಗೆ ಇಷ್ಟವಾದ ಕೆಲಸ: ಓದುವುದು, ಕಸೂತಿ, ಸಂಗೀತ, ವಗೈರೆ. 1½–3½ ರೆಸ್ಟ್. 3½ಗೆ Tea ಮತ್ತು Tiffin ಆದ ಮೇಲೆ ಬಟ್ಟೆ ಇಸ್ತ್ರಿ, ಗಿಡಕ್ಕೆ ನೀರು ಎಲ್ಲ ಮುಗಿಸುವ ಹೊತ್ತಿಗೆ ಮಕ್ಕಳು. ಯಜಮಾನರು ಹಿಂದಿರುಗುತ್ತಾರೆ. ಆಮೇಲೆ ಸಂಜೆ T.V. ನೂ ನೋಡಬಹುದು. ಅದಕ್ಕೂ Time ಆಗ್ತಾ ಇರ‍್ಲಿಲ್ಲ. ನಿಜ! ಬಹಳ Time waste ಮಾಡ್ತಾ ಇದ್ದೆ. ಎಲ್ಲಾ ಕೆಲಸ ಆದರೆ ಮನಸ್ಸಿಗೂ ಹರ್ಷ. ದೇಹಕ್ಕೆ ಆಯಾಸವೂ ಕಮ್ಮಿ. ನಾಳೆಯಿಂದಲೇ ಶುರು ನನ್ನ ಹೊಸ ದಿನಚರಿ. ಶುಭಸ್ಯ ಶೀಘ್ರಂ.

ಬೆಳಗ್ಗೆ ಐದಕ್ಕೆ ಎಚ್ಚರವಾಯಿತು. ಮೆಲ್ಲನೆ ಎದ್ದು ಶಬ್ದ ಮಾಡದೆ Walk ಹೊರಟೆ. ಬೆಳಗಿನ ತಂಗಾಳಿ, ಗಲಾಟೆ ಇಲ್ಲದ ರಸ್ತೆ, ಶಾಂತ ವಾತಾವರಣ ಬಹಳ ಹಿತವಾಗಿತ್ತು. ಉದಯ ರವಿಯ ಸೊಬಗನ್ನು ನೋಡುತ್ತಾ ನಡೆದೆ. ಗಡಿಯಾರ ನೋಡಿಕೊಂಡೆ. 6½ ಸ್ವಲ್ಪ ಬೇಗ ಬೇಗ ಹಿಂದಿರುಗಿದೆ. ಮೊದಲನೆಯ ದಿನ. ನಾಳೆಯಿಂದ ½ ಗಂಟೆ ಮಾತ್ರ Adjust ಮಾಡಿಕೋಬೇಕು. ಬಂದು ಅಡುಗೆ ಮನೆಗೆ ಹೋದೆ. ನಲ್ಲೀಲಿ ನೀರಿಲ್ಲ. ಮಂಗಳವಾರ ನೀರು ನಿಲ್ಲಿಸಿದರೆ ಬುಧವಾರ ಬಂದರೆ Luck. ಹೊರಗಿನ ನಲ್ಲೀಲಿ ಕುಡಿಯುವ ನೀರು ತರೋಣ ಎಂದು ಓಡಿದೆ. ಆ ನಲ್ಲೀನೂ Dry. ಅಷ್ಟರಲ್ಲೇ ಪಕ್ಕದ ಮನೆ ಕೆಲಸದವಳು ಬಂದಳು. "ಅಮ್ಮಾ, ನಿಮ್ಮನೆ ಜಯಾ ಇವತ್ತು ಕೆಲಸಕ್ಕೆ ಬರುಲ್ಲಮ್ಮ. ಅವರಮ್ಮನಿಗೆ ಹುಷಾರಿಲ್ಲ. ರಾತ್ರೀನೇ ಊರಿಗೆ ಹೋದಳು. ನಿಮ್ಗೆ ಹೇಳು ಅಂದ್ಳು"

"ನಿನಗೇನಾದರೂ ಬಿಡುವಾದರೆ ಒಂದೆರಡು ಪಾತ್ರೆ ಗಲಬರಸಿ ಕೊಡುತ್ತೀಯಾಮ್ಮ?" ಅಂಗಲಾಚಿದೆ.

"ಅಯ್ಯೋ ರಾಮ! ನಂಗೆ ಉಸರಾಡೋಕ್ಕೇ ಪುರಸೊತ್ತು ಇಲ್ಲಮ್ಮ. ಆಗಲ್ಲಮ್ಮ." ನಿರ್ದಾಕ್ಷಿಣ್ಯವಾಗಿ ಹೇಳಿ ಹೋದಳು.

ಬಚ್ಚಲು ತುಂಬ ಬಿದ್ದ ಪಾತ್ರೆ ನೋಡಿದೆ. ಶಾಂತಿ, ಶಾಂತಿ, ನಿಜ. ಮತ್ತೆ ಮತ್ತೆ ಅದೇ ಮಂತ್ರ ಹೇಳಿಕೊಂಡು ಬೇಕಾದ್ದೆರಡು ಪಾತ್ರೆ ಗಲಬರಿಸಿ ತರುವ ಹೊತ್ತಿಗೆ "ಅಮ್ಮ, ನಂಗೆ Special class. ಕಾಫಿ, ತಿಂಡಿ ಎರಡೂ ಕೊಟ್ಬಿಡಮ್ಮ ಸುಪುತ್ರ ಕೂಗಿದ. "Boilerನಲ್ಲಿ ನೀರು ಕಾದಿಲ್ಲ. ಕರೆಂಟ್ ಇಲ್ಲ. ಸ್ವಲ್ಪ ಬಿಸಿ ನೀರು ಕಾಯಿಸಿಕೊಡು Shaveಗೆ" ಯಜಮಾನರು ಕೂಗಿದರು. ಸುಪುತ್ರಿ ಎದ್ದಿರಲಿಲ್ಲ. ದೇವರೇ, ಶಾಂತಿ ಕೊಡು ಎಂದುಕೊಂಡು ಮತ್ತೆ ಗಡಿಬಿಡಿಯ ಕೆಲ್ಸ ಮಾಡಿ, 8-30ಕ್ಕೆ ಎಲ್ಲಾ ಹೊರಟ ಮೇಲೆ ಯೋಚಿಸಿದೆ.

ಆ ಸಮೃದ್ಧಿ ದೇಶದ ಮಹಾಶಯನ ಮಾತನ್ನು ನಂಬಿದೆನಲ್ಲ. ಅವರಿಗೆ ನೀರಿನ ಕೊರತೆ ಇಲ್ಲ. ಕರೆಂಟಿನ ತಾಪತ್ರಯ ಗೊತ್ತಿಲ್ಲ. ಹಾಲಿನ ಬವಣೆ ತಿಳಿಯದು. ಬೆಳೆದ ಮಕ್ಕಳು ಮನೆಯಲ್ಲಿರುವುದಿಲ್ಲ. ಅವರ ಸಂಸ್ಕೃತಿಗೂ, ನಮ್ಮದಕ್ಕೂ ಬಹಳ ವ್ಯತ್ಯಾಸ. ವೇಷಭೂಷಣ ಅನುಕರಿಸಿದರೂ, ಒಳಗಿನ ನಡವಳಿಕೆ – ಹೀನ ಸುಳಿ. ನಿಧಾನವಾಗಿ ಎದ್ದು ನನ್ನ ದಿನಚರಿ ಬರೆದಿದ್ದ ಹಾಳೆ ಹರಿದು. ಎಂದಿನಂತೆ ಗಾಣದೆತ್ತಿನಂತೆ ಕೆಲ್ಸ ಶುರು ಮಾಡಿದೆ. ನವಿಲನ್ನು ನೋಡಿ ಕೆಂಬೂತ ಪುಕ್ಕ ತೆರೆದರೆ ನವಿಲಾಗುತ್ತದೆಯೆ ?

ಸ್ವರ್ಗದ ಬಾಗಿಲಿನಲ್ಲಿ ಶೀನಣ್ಣನನ್ನು ದ್ವಾರಪಾಲಕರು ತಡೆದರು. "ನೀನಿನ್ನೂ ಸ್ವರ್ಗದ ಒಳಕ್ಕೆ ಬರುವ ಹಾಗಿಲ್ಲ. ಒಂದು ವರ್ಷ ದೂರದಲ್ಲಿ ಕೂತಿರೋ ಉಬ್ಬು ಹಲ್ಲಿನ ಮುದುಕಿ ಜೊತೆ ಕಳೆದರೆ ಆಮೇಲೆ ಸ್ವರ್ಗಕ್ಕೆ ಸ್ವಾಗತ"

ಶೀನಣ್ಣ ತನ್ನ ಅದೃಷ್ಟವನ್ನು ಶಪಿಸುತ್ತಾ, ಬೇರೇ ಮಾರ್ಗವಿಲ್ಲದೇ ಮುದುಕಿಯ ಹತ್ತಿರ ನಡೆದ. ದಾರಿಯಲ್ಲಿ ಕುಖ್ಯಾತ ಡಕಾಯಿತ ಮುದಿ ಮುಖದ ರಾಣಾಸಿಂಗ್, ಸ್ಮಿತಾ ಪಾಟೀಲಳ ಕೈ ಹಿಡಿದು ತೋಟದಲ್ಲಿ ವಿಹರಿಸುತ್ತಿದ್ದ. ಶೀನಣ್ಣನಿಗೆ ಕೋಪ ತಡೆಯಲಾಗಲಿಲ್ಲ. ಡಕಾಯಿತನಿಗಿಂತ ತಾನು ಕಡಿಮೆಯೇ. ಮತ್ತೆ ದ್ವಾರಪಾಲಕರತ್ತ ಹೋಗಿ ಅಹವಾಲನ್ನು ಹೇಳಿಕೊಂಡ.

ದ್ವಾರಪಾಲಕ ಹೇಳಿದ.

"ಅದು ಸ್ಮಿತಾಪಾಟೀಲಳಿಗೆ ವಿಧಿಸಿರುವ ಶಿಕ್ಷೆ"

# ಶುಭಾಶಯಗಳು

ಅ. ರಾ. ಸೇ.

ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳನ್ನು ಅಪರಂಜಿಯ ಓದುಗರಿಗೆ ಸಾದರ ಪೂರ್ವಕವಾಗಿ ಕಳುಹಿಸುತ್ತಿದ್ದೇವೆ. ಆಗಸ್ಟಿನಲ್ಲಿ ಈ ಮಹತ್ವದ ದಿನ ಬಂದುದರಿಂದ ನಿಮಗೆ ಸೆಪ್ಟಂಬರಿನಲ್ಲಿ ಈ ಶುಭಾಶಯಗಳು ತಲುಪುತ್ತಿವೆ.

ನಿಮಗೇನಾದರೂ, ಪುರಾಣಗಳನ್ನು ಓದುವ ಅಥವಾ ವ್ರತ ಕತೆಗಳನ್ನು ಕೇಳುವ ಹವ್ಯಾಸವಿದ್ದಿದ್ದರೆ. ಇಂತಹದೊಂದು ಕತೆಯ ಆರಂಭವನ್ನು ಕೇಳಿಯೇ ಇರುವಿರಿ.

"ಇಪ್ಪತ್ತೆಂಟನೆಯ ಕಲಿಯುಗದಲ್ಲಿ, ಜಂಬೂ ದ್ವೀಪದ ಭರತ ಖಂಡದ ಸೌಪರ್ಣಿಕಾ ನದಿಯ ತೀರದಲ್ಲಿ, ಬಡ ಬ್ರಾಹ್ಮಣನೊಬ್ಬನು, ಸಮಸ್ತಲೋಕಗಳಿಗೂ ಶುಭವನ್ನು ಕೋರುತ್ತಾ ತಪಃಸ್ವಾಧ್ಯಾಯನಿರತನಾಗಿದ್ದನು"

ಅದೋ ಆ ಅಣು ಸ್ಫೋಟದ, ಹೊಗೆಯ ಕೊಡೆಯ ಹಿಂದೆ ಕಾದು ನಿಂತಿರುವ ಇಪ್ಪತ್ತೊಂದನೆಯ ಶತಮಾನವನ್ನು ಕಾಣುತ್ತಿರುವ ನೀವು, ಈ ವಾಕ್ಯವನ್ನೋದಿ ನಕ್ಕು ಬಿಡುತ್ತೀರಿ.

ಇದಾವುದೋ ಓಬೀರಾಯನ ಕತೆ. ನೀರು ಹರಿಯುವ ನದಿಗಳೂ, ಅವುಗಳ ತೀರದಲ್ಲಿ ಬ್ರಾಹ್ಮಣನೂ ಇರುವುದು ಸಾಧ್ಯವೇ ? ಇದ್ದರೂ ತಪಸ್ಸು, ಸ್ವಾಧ್ಯಾಯ ಗಳನ್ನು ಮಾಡುತ್ತಿರುವುದು ಸಾಧ್ಯವೇ ? ಸ್ವಾಧ್ಯಾಯ ಎಂಬ ಶಬ್ದದ ಅರ್ಥವೇ ನಾದರೂ ಬರೆದವನಿಗೆ ಗೊತ್ತೇ ? ಎಂದುಬಿಡುತ್ತೀರಿ.

ಕ್ಯೂ ನಿಲ್ಲುವುದು, ಕೆಲಸದ ಬೇಟೆಯಾಡುವುದು, ಸಿಕ್ಕ ಕೆಲಸದ ಅಲ್ಪಾಲ್ಪ ಸಂಬಳ ಕಣ್ಣೀರಿಡುವುದು ಇವೇ ತಪಸ್ಸು.

ನಿಜವಾಗಿಯೂ ಈಗ ಅಂತಹವನೊಬ್ಬನಿದ್ದರೆ, ಅವನಿಗೆ ವಿವೇಕವೇನಾದರೂ ಇದ್ದರೆ, ತಾನು ಬ್ರಾಹ್ಮಣನೆಂದು ಹೇಳಿಕೊಳ್ಳುತ್ತಿದ್ದನೇ ? ಅವನಿಗೆ ಈಗಿನ ಸಮಸ್ತ ಜೀವರಾಶಿಗಳಿಗೆ ಶುಭವನ್ನು ಕೋರಲು ಮನಸ್ಸು ಬರುತ್ತಿತ್ತೇ ? )

ಶುಭವನ್ನು ಕೋರಲು ಈಗ ಇರುವುದು ಒಂದೇ ಮಾರ್ಗ. ಅಗ್ಗದ್ದಾದರೂ ಗ್ರೀಟಿಂಗ್ ಕಾರ್ಡ್ ಕೊಂಡು ಪೋಸ್ಟಿಗೆ ಹಾಕುವುದು. ಅದು ಆ ಬಡವನಿಗೆ ಸಾಧ್ಯ

ವಾಗುತ್ತಿತ್ತೇ ? ಅವರಂಜಿಗೂ ಆಗುವುದಿಲ್ಲ. ಆದುದರಿಂದ ಈ ಲೇಖನದ ಆದಿಯಲ್ಲೇ ಶುಭಾಶಯಗಳನ್ನು ತಲುಪಿಸಿದ್ದೇವೆ.

ಸ್ವಾತಂತ್ರ್ಯದ ಲಾಭಗಳು ಅನೇಕ. ಸ್ವತಂತ್ರ ದೇಶಗಳಲ್ಲಿ ಭಯೋತ್ಪಾದನೆ, ಬುಡಕಟ್ಟುಗಳ ಘರ್ಷಣೆ, ಚಲಾವಣೆ ನಾಣ್ಯಗಳ ಅಪಮೌಲ್ಯ, ರಾಜಕೀಯ ಪಕ್ಷಗಳ ಕಿತ್ತಾಟ, ಅಷ್ಟೇ ಅಲ್ಲ ಒಂದೇ ಪಕ್ಷದ ಎರಡು ಅಥವಾ ನಾಲ್ಕು ಗುಂಪುಗಳ ನಿರಂತರ ಸಮರ, ಮೈನಾರಿಟಿ ಸರ್ಕಾರಗಳ ತಿಪ್ಪರಲಾಗ ಇತ್ಯಾದಿಗಳು ಸ್ವತಂತ್ರ ದೇಶದಲ್ಲಲ್ಲದೆ ಇನ್ನೆಲ್ಲಿರಲು ಸಾಧ್ಯ ?

ಈ ಶುಭ ದಿನದಂದು ನಾವು ರಾಷ್ಟ್ರಪಿತನೆಂದು ಹೆಸರಾದ ಮಹಾತ್ಮಾ ಗಾಂಧೀಜಿಯವರ ಸ್ಮರಣೆಯನ್ನು ಮಾಡಿದೆವು. ಅವರೇ ಅಲ್ಲವೇ ನಮ್ಮ ಸ್ವಾತಂತ್ರ್ಯ ಹೋರಾಟದ ನೇತಾರರು ? ಅವರು ಪ್ರತಿಪಾದಿಸಿದ ಶಾಂತಿ, ಸತ್ಯ, ಅಹಿಂಸೆ, ಪ್ರೇಮ, ಸ್ವಾವಲಂಬನೆ, ಸರ್ವಧರ್ಮ ಸಹಭಾವಗಳೇ ಅಲ್ಲವೇ ನಮ್ಮ ಜೀವನದ ನಾಡಿಗಳು ?

ನಮ್ಮವರೇ ಅಲ್ಲವೇ ಎಲ್ಲ ಕಣ್ಣುಗಳ ಕಣ್ಣೀರನ್ನೊರಸಿದವರು ? ನಮ್ಮವರೇ ಅಲ್ಲವೇ ಇಡೀ ದೇಶದಲ್ಲಿ ಹಾಗೂ ನ್ಯಾಯಾಂಗ ವಿಧಾಯಕ ಸಭೆಗಳಲ್ಲಿ ಒಂದು ಕೆಟ್ಟ ಮಾತಾಡದೆ, ಒಂದು ಜಗಳಕ್ಕೆ ಕೈ ಹಾಕದೆ ಶಾಂತಿಯಿಂದಿರುವವರು.

ಸಿನಿಮಾ, ಧಾರಾವಾಹಿಗಳಲ್ಲಿ ಪ್ರೇಮವು ತುಂಬಿ ತುಳುಕುತ್ತಿಲ್ಲವೇ ?

ಸ್ವಾವಲಂಬನೆಯ ಅಂಗವಾಗಿ, ನಾವು ಬರೀ ರಫ್ತು ಮಾಡಿ, ಪರದೇಶಗಳಿಂದ ಆಮದನ್ನೇ ನಿಲ್ಲಿಸಿರುವುದು ? ಅದಕ್ಕೇ ಅಲ್ಲವೇ ಐದ ಪತ್ತಲೆ ಟನ್ನು ಚಿನ್ನವನ್ನು ಪರದೇಶಗಳಲ್ಲಿ ಒತ್ತೆ ಇಟ್ಟಿರುವುದು ?

ನಾವೇ ಅಲ್ಲವೇ ನಮ್ಮ ಧರ್ಮವನ್ನು ಬಿಟ್ಟು ಉಳಿದೆಲ್ಲ ಧರ್ಮಗಳನ್ನು ಆಕಾಶಕ್ಕೆತ್ತಿ ಪತಿಕರಿಸುತ್ತಿರುವುದು ?

ನೀವು ಹೇಳಬಹುದು 'ಯಾರಿಗೆ ಬೇಕು ಶುಭಾಶಯಗಳು ?' ನಿಮಗೆ ನಾವೂ ಕಳಿಸಬೇಕಾಗುತ್ತದೆ. ಅಂಚೆ ದರಗಳು ದಿನೇ ದಿನೇ ಕಡಿಮೆಯಾಗುತ್ತಿವೆ. ನಾವು ಮಾಡಿದ ಕೈಗಡ, ಸಾಲಗಳಲ್ಲದೆ, ನಮ್ಮೆಲ್ಲರ ತಲೆಯ ಮೇಲೆ ತಲಾ 1200 ರೂ. ಸಾಲ (ರಾಷ್ಟ್ರೀಯ) ವಿದೆ ಎಂದು

ಮಿತ್ರರೇ,

ಶುಭಾಶಯಗಳನ್ನು ಕಳಿಸಲು ಏನೂ ಖರ್ಚಿಲ್ಲ. ಆದರೆ ಉಪಯೋಗ ಬಹಳ ಏದೆ.

ಭೂಮಿಯನ್ನಾವರಿಸಿರುವ ಓಜೋನ್ ಪದರದಲ್ಲಿ ತೂತುಗಳು ಬಿದ್ದಿವೆಯಷ್ಟೆ. ಪ್ರಗತಿಗೆ ಇದು ಎಲ್ಲರೂ ತೆರಲೇ ಬೇಕಾದ ಬೆಲೆ. ವಿಜ್ಞಾನಕ್ಕೆ ನಾವು ತೆರುವ ಕಪ್ಪಕಾಣಿಕೆ.

ನಾವೆಲ್ಲಗೂ ಬಾಹ್ಯಾಕಾಶದತ್ತ, ನಮ್ಮ ಹಾರ್ದಿಕ ಶುಭಾಶಯಗಳನ್ನು ಕಳಿಸೋಣ. ಈ ಶುಭಾಶಯಗಳು ಓಜೇನ್ ಪದರದ ತೂತುಗಳನ್ನು ಮುಚ್ಚುತ್ತವೆ.

## ಪ್ರಜಾಪ್ರಭುತ್ವದ ವೈಖರಿ

ರಂ

'ಅ' ವರ್ಗಕ್ಕೆ ಐದು
'ಬ' ವರ್ಗಕ್ಕೆ ಏಳು
'ಸ' ವರ್ಗಕ್ಕೆ ಒಂಭತ್ತು
ಹಿಂದಾದವರಿಗೆ ಹನ್ನೊಂದು
ಮುಂದಾದವರಿಗೆ ಇನ್ನೊಂದು
ಹಿಂದೆ ಮುಂದಿದ್ದವರಿಗೂ ಮತ್ತೊಂದು
ಮಿಕ್ಕವರಿಗೆಲ್ಲಾ ಒಂದೊಂದು
ಆಯಿತೇ ಸಮಾಧಾನ ?
ಉಳಿಸುವಿರೇ ನನ್ನ ಸ್ಥಾನ ?
ಉಳಿಯುವುದೇ ನನ್ನ ಮಾನ ?

ವಾಹ್ !
ಇದೆಂಥಾ ಉಪಾಯ ?
ಮೊದಲ ಸ್ಥಾನಕ್ಕೆ ಒಬ್ಬರೇ ಏಕೆ ?
ಇದು ಶುದ್ಧ ಅನ್ಯಾಯ !
ಮುಗಿಯದು ನಮ್ಮ ಬಂಡಾಯ !

# ಯಾಕೆ ಹೀಗೆ?!

ಶಾಂತಾ ರಘು

---

"Extension ಪ್ಲಗ್ ಹಾಕ್ಕೊಂಡು, ಅದಕ್ಕೆ ರೇಡಿಯೋಗ್ರಾಂ, ಟಿ.ವಿ., ವೀಡಿಯೋ, ಫ್ಯಾನು, ಎಲ್ಲದರ ಪ್ಲಗ್ ಸಿಕ್ಕಿಸಬೇಡ್ರೋ, ಓವರ್ ಲೋಡ್ ಆಗತ್ತೆ, ಅಂದ್ರೆ ಹುಡುಗರು ಕೇಳ್ತಾರ್ಯೆ? ಹಾಕಿದ್ರು.. ಏನು ಎಡವಟ್ಟಾಯ್ತೋ, ಫ್ಯೂಸ್ ಹೋಯಿತೋ, ಷಾರ್ಟ್ ಆಯಿತೋ, ಅಂತೂ ಒಂದು ಸಂಜೆ ನಮ್ಮನೇಲಿ ಪವರ್ ಹೋಯ್ತು. K.E.B.ಗೆ ಫೋನು, ಮಾಡಿದೆ, ಮಾಡಿದೆ. "ಇಗೋ ಬಂದ್ವಿ ಮೇಡಂ" ಅಂದ್ರು.

"ಯಾರಿಗೂ ಮೈ ತುರಿಸಿಕೊಳ್ಳೋಕೂ ಪುರಸೊತ್ತಿಲ್ಲ. ಬಿಡುವಾದ ಕೂಡ್ಲೇ ಬರ್ತೀವಿ" ಅಂದ್ರು.

"ಏನ್ ಮೇಡಂ? ಯಾವಾಗ್ಲೂ ನಿಮ್ ಏರಿಯಾದಿಂದ ಈಪಾಟಿ ಕಂಪ್ಲೇಂಟು?" ಅಂತ ನಮ್ಮ ತಲೇ ಮೇಲೇ ಗೂಬೆ ಕೂರಿಸಿದ್ರು.

K.E.B.ಗೇ ಹೋದ್ರೆ ಅಲ್ಲಿ ನೊಣ ಹೊಡಿಯೋಕೂ ಯಾರೂ ಇರ್ಲಿಲ್ಲ. ಒಟ್ನಲ್ಲಿ ಅವರಿಗಾಗಿ ಮೂರನೆಯ ದಿನ ಸಂಜೆ, 4 ಗಂಟೆವರ್ಗೂ ಕಾದೆ, ಕಾದೆ, ಸುಸ್ತಾದೆ. 4-30ಗೆ ಮನೆ ಹಿಂದೆ ಇದ್ದ, ಲೈಬ್ರರಿಗೆ ಪುಸ್ತಕ ವಾಪಸ್ಸು ಕೊಡೋಕೆ ಹೋದೆ. 4-40ಕ್ಕೆ ತಿರುಗಿ ಒಂದು ಮನೆ ಬೀಗ ತೆಗೀತಾ ಇದ್ದಾಗ, ನೆರೆಮನೆ ಸ್ನೇಹಿತೆ – "ಶಾಂತಾ, ಈಗ್ತಾನೇ K.E.B.ಯವರು ಬಂದು. ಮನೆ ಬೀಗಾ ಅಂತ ವಾಪಸ್ಸು ಹೋದ್ರು" ಅಂದ್ಲು. ಯಾಕೆ ಹೀಗೆ?!

15 ದಿನಗಳಿಂದ ಒಳ್ಳೆ ಬಿಸಿಲು ಬೆಂಗಳೂರಲ್ಲಿ. ಏಳೆಂಟು ಸಿಲ್ಕ್ ಸೀರೆಗಳನ್ನ ಸುಮಾರು ದಿನಗಳಿಂದ ಒಗೆಯೋಕೆ ತೆಗೆದಿಟ್ಟಿದ್ದೆ. 24ನೇ ಜೂನ್, ಮಧ್ಯಾಹ್ನ ಮೂರು ಗಂಟೆಗ ಎಲ್ಲಾ ಸೀರೆಗಳನ್ನೂ ಸರ್ಫ್‌ನಲ್ಲಿ ನಾಜೂಕಾಗಿ ಒಗೆದು, ಟೆರೇಸ್‌ನಲ್ಲಿ ಹರವಿ, ಕೆಳಗೆ ಬಂದೆ. ಸರಿಯಾಗಿ ಹತ್ತೇ ನಿಮಿಷಕ್ಕೆ ಧಿಡೀರನೆ ಮಳೆ ಮೋಡ. ಹದಿಮೂರನೇ ನಿಮಿಷ ದಢ ದಢನೆ ಮಳೆ. ಹಲವಾರು ವಾರಗಳು ವಾರ್ಡ್‌ರೋಬಿನಲ್ಲಿ ಹಾಯಾಗಿದ್ದ ಸೀರೆಗಳೆಲ್ಲ ತೊಯ್ದು ತೊಪ್ಪೆಯಾಗಿ, ಜೊಂಪೆ ಜೊಂಪೆಯಾಗಿ ಜೋತಾಡ್ತಾಯಿದ್ವು. ಯಾಕೆ ಹೀಗೆ?!

ಸುಮಾರು ದಿನಗಳಿಂದ ಪ್ರೋಗ್ರಾಂ ಹಾಕಿ, ರೆಕ್ಸ್‌ನಲ್ಲಿ 'ಪೋಲೀಸ್ ಅಕಾಡೆಮಿ, 5' ಪಿಕ್ಚರ್‌ಗೆ ಹೊರಟಿದ್ವಿ. ಕಾರಲ್ಲಿ ಕೂತ್ರೆ, ಕಾರು ಸ್ಟ್ರೈಕು. ಬಾನೆಟ್ ತೆರೆದು, ತಿಳಿದ ವೈದ್ಯಗಳನ್ನೆಲ್ಲಾ ಮಾಡಿದ್ದಾಯ್ತು. ನೀರಿದೆ, ಆಯಿಲ್ ಇದೆ, ಪೆಟ್ರೋಲ್ ಇದೆ. ಏನ್ಬಂತು ರೋಗ ಕಾರಿಗೆ ಧಿಡೀರನೆ ? ಚೋಕ್ ಎಳೆದ್ರೂ ಇಲ್ಲ, ದೌಸನಲ್ಲಿ ದಬ್ಬಿದ್ರೂ ಇಲ್ಲ. ಸರಿ, ಸಿನಿಮಾ ಪ್ರೋಗ್ರಾಂ ಹರೋಹರ. ನನ್ನ ಮಗ ಗೊಣಗಿ ಕೊಂಡೇ ಹೋಗಿ, ಮೆಕಾನಿಕ್ ಸುಬ್ರಾಮನನ್ನ ಕರೆತಂದ. ಸುಬ್ರಾಮನೋ ಬಲು ಬಿಜಿ. ಏನೋ ಉಪಕಾರ ಮಾಡೋವನಂತೆಯೆ ಒರೋದು. ಆ ಸುಬ್ರಾಮು, ಕಾರಲ್ಲಿ ಕೂತು ಇಗ್ನಿಷನ್ ತಿರುಗಿಸಿದ್ದೇ ತಡ, ಕ್ಷಣಾರ್ಧದಲ್ಲಿ ಸ್ಟಾರ್ಟ್ ಆಗಿ, ಗಂಭೀರವಾಗಿ ಗುರುಗುಟ್ಟಿತು. ನಮ್ಮೆಲ್ಲರ ಮುಖಾರವಿಂದಗಳಿಂದ ಒಂದುಬಕೀಟು ಪೆಚ್ಚು ಖಳೆಯೋ ಸುರಿದಿರಬಹುದು !

"ಏನ್ಸಾರ್ ? ಸರೀಗೆ ಸ್ಟಾರ್ಟ್ ಮಾಡ್ಲಿಲ್ವಾ ?" ಅಂತ, 30 ವರ್ಷಗಳಿಂದ ಒಂದೇ ಸಮನೆ ಡ್ರೈವ್ ಮಾಡ್ತಾ ಇರೋ ನಮ್ಮ ಯಜಮಾನರನ್ನ ಕೇಳ್ತಾ ಸುಬ್ರಾಮು ಹೋದ, ಭೂಪ. ಯಾಕೆ ಹೀಗೆ ? !

ನನ್ಮಗ ಮೂರು ವರ್ಷದಲ್ಲಿ ಬಲು ಮುದ್ದಾಗಿ ಒಂದು ಶ್ಲೋಕ ಹೇಳ್ತಾ ಯಿದ್ದ. "ದುಯುಬ್ಬಮ್ಮಾ ದುಯು ವಿಷ್ನು, ದುಯು ದೇವೋ, ಮಹೇಚಲ" (ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಃ ! !) ಇದು ಅವನಿಗೆ ಬಲು ಅಚ್ಚುಮೆಚ್ಚು ಒಂಚೂರೂ ಬಿಗುಮಾನ ಇಲ್ದೆ ಎಲ್ರ ಮುಂದೆ ಒಪ್ಪಿಸ್ತಾ ಯಿದ್ದ. ಮನೇಗೆ ಯಾರು ಹೊಸಬರು ಬಂದ್ರು, ಮೊದ್ಲು ಅವನ್ನ ತೊಡೇ ಮೇಲೆ ಕೂಡಿಸ್ಕೊಂಡು, ಆ ಶ್ಲೋಕಾನ ಕೇಳಲೇಬೇಕು. ಕೊನೇಗೆ, ತರಕಾರಿ ಮಾರೋ ನಾಕಮ್ಮನ ಮುಂದೆ ಸಹ ಪ್ರತಿ ದಿನ ಒಂದ್ಸಾರಿ ಅವನು ಪಾಠ ಒಪ್ಪಿಸಿದ ಮೇಲೇ, ಅವಳು ಬುಟ್ಟಿ ಎತ್ತಬೇಕಾಗಿತ್ತು.

ಹೀಗಿರೋವಾಗ. ವರ್ಷಾನುಗಟ್ಲೆಯಿಂದ ಬರದೇ ಇದ್ದ ವೆಂಕಟರಮಣ ಜೋಯಿಸರು, ಹಠಾತ್ತಾಗಿ ಒಂದಿನ ನಮ್ಮನೇಗೆ ದಯಮಾಡಿಸಿದ್ರು. ಹಳೇ ಪರಿಚಯ. ಮಹಾ ಪಂಡಿತರು. ಅವರ ಮುಂದೆ ನನ್ನ ಮಗನ ಜ್ಞಾನ ಭಂಡಾರವನ್ನು ಪ್ರದರ್ಶಿಸಬೇಕೂಂತ ನನಗೆ ಬಲು ಆಸೆಯಾಯ್ತು. ಎಲ್ರೂ ಮಾತಾಡ್ತಾ ಕೂತಿ ದ್ದಾಗ—-"ಪುಟ್ಟಾ ! ಮಾಮಂಗೆ ಗುರುಬ್ರಹ್ಮ ಹೇಳಿ ತೋರ್ಸೋ" ಅಂದೆ.

ಹಾದಿ ಬೀದೀಲಿ ಹೋಗೋರು ಬರೋರ ಮುಂದೆಲ್ಲಾ ಅರಗಿಣಿಯ ಹಾಗೆ ಪಾಠ ಒಪ್ಪಿಸ್ತಾಇದ್ದ ನನ್ನ ಕುಮಾರಕಂಠೀರವ, ಹಿಂದೆ ಹಿಂದೆ ಹೆಜ್ಜೆ ಇಟ್ಟು ನನ್ನ ಬೆನ್ನ

ಹಿಂದೆ ಅವಿತುಕೊಂಡ. ಎಂಟು ಮನೆಗ ಕೇಳೋ ಹಾಗೆ "ಅಮ್ಮಾ! ಈ ಮಾಮ ಯಾವಾಗ ಓಗ್ತಾರೆ ?" ಅಂತ ಗಂಟೆ ಹೊಡೆದ ಹಾಗೆ ಸ್ಪಷ್ಟವಾಗಿ ಕೇಳಿದ. ಯಾಕೆ ಹೀಗೆ ? !

ಅಪರೂಪದ ಅತಿಥಿಗಳನ್ನು ಡಿನ್ನರ್‌ಗೆ ಕರೆದಾಗ, ಕರೆಕ್ಟಾಗಿ 9 ಗಂಟೆಗೆ, ಧಿಡೀರನೆ K.E.B.ಯವನ ಕೃಪಾಕಟಾಕ್ಷನಮ್ಮ ಮೇಲೆ ಬಿದ್ದು ಧಢಾರನೆ ಕರೆಂಟ್ ಹೋಗುತ್ತಲ್ಲ ? ಅದು ಹೇಗೆ ? !

ವಾರಾನುಗಟ್ಲೆಯಿಂದ, ಹೊಗೇನಕ್ಕಲ್‌ಗೆ ಪಿಕ್‌ನಿಕ್ ಪ್ಲಾನ್ ಮಾಡಿ, ಕಾರಿಗೆ ಸಾಮಾನು ಲೋಡ್ ಮಾಡ್ತಾಯಿರೋವಾಗ್ಲೇ, ತಿಂಗಳಾನುಗಟ್ಲೆಯಿಂದ ಹೇಳ ಹೆಸರಿಲ್ಲದಿದ್ದ ಬಾದರಾಯಣ ಸಂಬಂಧದ ನೆಂಟರು, ಟ್ಯಾಕ್ಸೀಲಿ ಬಂದಿಳೀತಾರಲ್ಲ ? ಅದು ಹೇಗೆ ? !

ಬೆಳಗ್ಗೆಯಿಂದ ತೆಪ್ಪಗಿದ್ದ ಫೋನು, ಸ್ನಾನಕ್ಕೆ ಇಳಿದ ಎರಡನೇ ನಿಮಿಷ ಹೊಡ ಕೊಳ್ಳುತ್ತಲ್ಲ ? ಅದು ಹೇಗೆ ? !

ಆಸೆಯಿಂದ ಮೆಂತ್ಯದ ದೋಸೆಗೇಂತ ಅಕ್ಕಿ ತೊಳೆದು ಗ್ರೈಂಡರ್‌ಗೆ ಹಾಕಿದ ಮೂರನೇ ನಿಮಿಷ ಕರೆಂಟ್ ಹೋಗುತ್ತಲ್ಲ ? ಅದು ಹ್ಯಾಗೆ ?

ಡಬ್ಬಲ್ ರೋಡಿನಲ್ಲಿ ನೂರಾರು ಕಾರುಗಳ ಮಧ್ಯೆ ನಂಪಾಡಿಗೆ ನಾವು ಹೋಗ್ತಾಯಿದ್ರೆ, ಎಲ್ಲಿಂದ್ಲೋ ಹಾರ್ತಾ ಬರೋ ಕಾಗೆ – ಅಷ್ಟು ಕಾರುಗಳನ್ನೂ ಬಿಟ್ಟು – ಕರೆಕ್ಟಾಗಿ ನಮ್ಮ ಕಾರಿನ ತಲೇ ಮೇಲೇ ಪ್ರಸಾದ ದಯಪಾಲಿಸುತ್ತಲ್ಲ ? ಅದು ಹ್ಯಾಗೆ ? !

ನನ್ನ ಈ 'ಹೇಗೆ'ಗಳ ಹಗರಣ ತಾಳಲಾರದೆ ನಮ್ಮವರು "ಅದು ಹಾಗೇ ಕಣೆ, Murphy's Law ಅಂತ ಕೇಳಿಲ್ವ ನೀನು ?" ಅಂದ್ರು.

"ಅದೇನ್ರೀ ಅದು ಹೊಸಾ Law ? Newton's law, Mendel's law, Parkinson's law, ಹೀಗೆಲ್ಲಾ ಕೇಳಿದೀನಿ. ಅದೇನದು Murphy's law ?"

"ನೀನಿಷ್ಟು ಹೊತ್ತು ಹೇಳ್ತಾಯಿದ್ಯಲ್ಲಾ – ಅದೇ (ನಾವು ಯಾವುದು ಆಗ ಬಾರದೂಂತ ಅಂದ್ಕೊಂಡಿರ್ತೀವೋ, ಅದೇ ಆಗತ್ತಲ್ಲ – ಅದೇ Murphy's law. ಉದಾಹರಣೇಗೆ, ನಿನ್ನ ಹೊಚ್ಚ ಹೊಸಾ ಕಾರ್ಪೆಟ್ ಮೇಲೆ, ಒಂದೇ ಕಡೆ ಬೆಣ್ಣೆ ಹಚ್ಚಿದ ಬ್ರೆಡ್ ಸ್ಲೈಸ್ ಹಿಡ ಕೊಂಡು ನಿಂತ್ಕೊ. ಕೈ ಬಿಡು. ಬ್ರೆಡ್ಡಿನ ಬೆಣ್ಣೆ ಹಚ್ಚಿದ ಪಕ್ಕವೇ ಗ್ಯಾರಂಟಿ ನಿನ್ನ ಹೊಸಾ ಕಾರ್ಪೆಟ್ ಮೇಲೆ ಬೀಳತ್ತೆ ಗೊತ್ತಾ ? "

"ಯಾಕೋ ಹಾಗೆ ? "

"ಯಾಕೇಂದ್ರೆ ? ನಿನ್ಹೊಟ್ಟೆ ಉರೀಬೇಕಲ್ಲಾ ಅದಕ್ಕೆ !" ○

# ನಿರುದ್ಯೋಗಿಯ ಸ್ವಪ್ನ

ಲಿಂಕ್ಸ್

---

"ಬಿ.ಎಸ್ಸಿ" ಪದವೀಧರ।
ಹುಟ್ಟು ಕಡು ಬಡವ ಅಮರ।
ಕೆಲಸಕ್ಕೆ ಅಲೆದಲೆದು ಆಯಿತು ಬೇಸರ॥
ತಿರುಪತಿ ತಿಮ್ಮಪ್ಪನಿಗೆ ಹೇಳಿಕೊಂಡನು ಹರಕೆ।
ಕೊಟ್ಟನು ಅಣ್ಣಮ್ಮನಿಗೆ ನೈಲಾನ್ ರವಿಕೆ।
ಕೆಲಸ ಸಿಗುವುದು ಅಷ್ಟೇನೂ ಸುಲಭವಲ್ಲ।
ತಿಮ್ಮಪ್ಪ, ಅಣ್ಣಮ್ಮನಿಗೂ ಗೊತ್ತು ಇದರ ಮರ್ಮವೆಲ್ಲ।
ಖಾಲಿ ಇದೆ ಕೆಲಸವೊಂದು ಮೃಗಾಲಯದಲ್ಲಿ।
ಸುದ್ದಿ ಕೇಳಿದಾಕ್ಷಣ ಹೊರಟನು ಅಮರ ಕಾಲ್ನಡಿಗೆಯಲ್ಲಿ।
ಕಠಿಣ ಕೆಲಸ, ಸಾಧ್ಯವೇ ? ಕೇಳಿದ ಮೃಗಾಲಯದಧಿಕಾರಿ।
ಅದಕೇಳಿ ಅಮರನಿಗಾಯ್ತು ಸ್ವಲ್ಪ ಗಾಬರಿ।
ಧೈರ್ಯದಿಂದ ನಿರುಪಾಯಿ ಉತ್ತರಿಸಿದನು।
ಸರ್ಪದ ಹಲ್ಲು ಕಿತ್ತು ತರಲೇ ? ಅಧಿಕಾರ್ಯಿ ತತ್ತರಿಸಿದನು।
ಗಂಡು ಚಿಂಪಾಂಜಿಯ ಚರ್ಮ ಧರಿಸಿ
ಹೆಣ್ಣು ಚಿಂಪಾಂಜಿಯ ನಗುನಗುತ ಇರಿಸಿ।
ಓಹೋ! ಇದು ಯಾವ ಕಠಿಣ ಕೆಲಸ।
ಮಾಡುವೆನು ಕುಡಿಯುವಂತೆ ಪಾಯಸ।
ಒಂದು ದಿನ ಕಳೆಯಿತು ಸಂತಸದಲಿ।
ಮರುದಿನ ಚಿಂಪಾಂಜಿ ನೂಕಿತು ಉಯ್ಯಾಲೆಯ ರಭಸದಲಿ।
"ಬಿ.ಎಸ್ಸಿ" ಪದವೀಧರ ಹೋಗಿ ಬಿದ್ದನು ಸಿಂಹದ ಬೋನಿನಲಿ।
ಹೆದರಿ, ಬೆದರಿ, ಬೆವರಿ ಚೀರಿದನು ಕನಸಿನಲಿ।
ಸಿಂಹವು ಹೇಳಿತು ಹೆದರಬೇಡ "ಬಿ.ಎಸ್ಸಿ"
ನಾನೂ "ಎಂ.ಎಸ್ಸಿ" ನಿನ್ನ ಪಕ್ಕದಲಿ।

# ತರೀ ಕೆರೆ ಕೆರೆ ಏರಿ ಮೇಲೆ

ಶಿವ

---

ಏನಾಯ್ತು? ಈಗಿನ ಕಾಲದ ಯಾವುದೇ ಕಾನ್ವೆಂಟ್ ಕುವರಿಯನ್ನು ಕೇಳಿದರೂ ಒಂದೇ ಉತ್ತರ 'ಗೊತ್ತಿಲ್ಲ'. ಆದ್ರೆ ನಿಮ್ಮ ಪಕ್ಕದ ಮನೆ 'ಆತ'ನನ್ನೊ ಮುಂದಿನ ಮನೆ 'ಆಕೆ'ಯನ್ನೊ ಕೇಳಿದರೆ ಉತ್ತರ ಥಟ್ಟನೆ ಬರುತ್ತದ. "ಅಷ್ಟೂ ಗೊತ್ತಿಲ್ವೆ. ಮೂರು ಕರಿ ಕುರಿಮರಿ ಮೇಯುತಿತ್ತು" ಹಲವು ದಶಕಗಳ ಹಿಂದೆ ಎಲ್ಲ ಮಕ್ಕಳೂ ನಾಲಿಗೆ ಸುಲಭವಾಗಿ ಹೊರಳುವುದನ್ನು ಅಭ್ಯಾಸ ಮಾಡಿಕೊಳ್ಳಲು ಪ್ರಯೋಗಿಸುತ್ತಿದ್ದ ವಾಕ್ಯ "ತರೀಕೆರ....ಇತ್ಯಾದಿ"

ಹಾಗೆಂದ ಮಾತ್ರಕ್ಕೆ ಈ ಇಂಗ್ಲೀಷ್ ಶಾಲಾ ಮಕ್ಕಳು ಇಂಥ ವಾಕ್ಯಕ್ಕೆ ಅಪರಿಚಿತರೇನಲ್ಲ. "She sells sea shells on the sea shore" ಎಂಬ ಒಡ ಮಹಿಳೆಯೊಬ್ಬಳ ಹಾರಾಟಕಥನ ಕರ್ನಾಟಕದ ಯಾವುದೇ ಮೂಲೆಯ ಕಾನ್ವೆಂಟಿನಲ್ಲೂ ಬಹುವಾಗಿ ಬಳಕೆಯಲ್ಲಿರುವ ಪದಸಮುಚ್ಚಯ. ಇಂಥ ಮಕ್ಕಳಿಗೆ ಕನ್ನಡಾಭಿಮಾನವನ್ನು ಮೂಡಿಸಲು, ಕೆಳಗಿನ ವಾಕ್ಯಗಳನ್ನು ಅಭ್ಯಾಸಕ್ಕಾಗಿ ಕೊಟ್ಟಿದೆ ಜೈ ಭುವನೇಶ್ವರಿ!

**೧) ಬಂಗಾರಪ್ಪ ಬಹುಬೇಗ ಬೆಂಗಳೂರಿಗೆ ಬೂಟಾಸಿಂಗರನ್ನು ಬರಮಾಡಿಕೊಂಡರು.**

**೨) ಡಾಲರಿಗರು ಧಾವಿಸಿ ಬಂದರೆ ದೇಶದ ದಾರಿದ್ರ್ಯತೆ ಧೂಳೀಪಟವಾದೀತೆ?**

**೩) ಕಾಶ್ಮೀರದ ಕಾದಾಡುವ ಕುವರರ ಕುಯುಕ್ತಿಯಿಂದ ಕೇಂದ್ರದ ಕಥೆ ಕರುಣಾಜನಕ.**

**೪) ಪೆಟ್ರೋಲ್ ಪಂಪುಗಳ ಸೊಂಪಿನ ಪ್ರಭುಗಳು ಪಂಪು ಮಾಡಲು ಸಂಪು**

**೫) ನೆರೆದ ನಾಗರಿಕರು ನಾರಿಯ ನಿವಾಸಕ್ಕೆ (ಹತ್ತು, ಜನಪಥ) ನುಗ್ಗಲು ನರಸಿಂಹ ನಡುಗಿದ.**

**೬) ವ್ಯಾಘ್ರ ಸಖದ ಉಗ್ರವಾದಿಗೆ ಸಮಗ್ರ ಭಾರತದಲ್ಲಿ ಅಗ್ರಸ್ಥಾನ**

**೭) ಬಿಂಕವಿಲ್ಲದೇ ಸುಂಕ ಕೊಟ್ಟರೆ ಎಂಕನಿಗೆ ಬೇಕಾದ ಅಂಕ ಪಟ್ಟಿ, ಶಂಕೆಬೇಡ**

**೮) ಕತ್ತಿಗೆ ಮುತ್ತಿನ ಮಾಲೆ ಬಿತ್ತು ತೊತ್ತು ಮುತ್ತುವಿಗೆ ಒತ್ತಿದಳು ಮುತ್ತು**

**೯) ಇಂದು ಮುಂಜಾನೆ ಪಂಜಾಬಿನಲ್ಲಿನ ಯುಂಯುಡಾಟ ರಂಜನೀಯವಾಗಿತ್ತು**

**೧೦) ಭಂಕಿ ಪಾಂಡೆ ನೋಡಲು ನಮ್ಮ ಪಿಂಕಿ, ಪಂಕಿ ಧರಿಸಿ ಹೋದಳು.**

## ಅಪರಂಜಿ ಜಾಹೀರಾತು ದರಗಳು

| | | |
|---|---|---|
| ಪೂರ್ಣ ಪುಟ (Full Page)– | ರೂ. 800/- | ಮೂರು ಸಂಚಿಕೆಗಳಲ್ಲಿ ಸತತ |
| ಅರ್ಧ ಪುಟ (Half Page)– | ರೂ. 400/- | |
| ಕಾಲು ಪುಟ (Quarter Page)– | ರೂ. 250/- | |

ಜಾಹೀರಾತುಗಳನ್ನು, ಅವುಗಳ ವರ್ಗಕ್ಕೆ ತಕ್ಕ ಚೆಕ್ಕುಗಳೊಡನೆ ಕೆಳಗಿನ ವಿಳಾಸಕ್ಕೆ ಕಳುಹಿಸಿ.

**ಅಪರಂಜಿ ಕಾರ್ಯಾಲಯ**
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ ಬೆಂಗಳೂರು–560 003

ವಿ.ಸೂ:– ಚೆಕ್ಕುಗಳನ್ನು ಅಪರಂಜಿ ಹೆಸರಿಗೆ ನಮೂದಿಸಬಹುದು

REGISTERED No. BGW-180



Printed by V R NATH for the Publisher M SHIVA KUMAR, Published and owned by M SHIVA KUMAR, 36, 6th Main Road, Malleswaram, Bangalore-560 003 Printed at IMPRESSIONS, 404, Sampige Road, Malleswaram, Bangalore-560 003 Editor : M SHIVA KUMAR